# ನಗರಸಭಾ ಕಾರ್ಯಾಲಯ, ರಾಮನಗರ

ನಂ. ಸಾಮಾನ್ಯ ಸಭೆ/01/2007-08 ದಿ. 11.06.2008

ದಿನಾಂಕ 11.06.2008 ರಂದು ಬುಧವಾರ ಬೆಳಗ್ಗೆ 11.00 ಗಂಟೆಗೆ ನಗರಸಭೆಯ ಪ್ರಶಸ್ತಿ ಭವನದಲ್ಲಿ ಶ್ರೀ ಕೆ. ಶೇಷಾದ್ರಿ (ಶಶಿ) ರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು.

| ಹಾಜರಿ-29 | ಗೈರುಹಾಜರಿ- 02 | ಒಟ್ಟು- 31 |
|---|---|---|
| xxx | xxx | xxx |

ಸಭೆಯ ಪ್ರಾರಂಭದಲ್ಲಿ ಪೌರಾಯುಕ್ತರು, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಗೌರವಾನ್ವಿತ ಸದಸ್ಯರನ್ನು ಹಾಗೂ ಪತ್ರಕರ್ತರನ್ನು ಸಭೆಗೆ ಸ್ವಾಗತಿಸಿದರು. ನಂತರ ಸಭೆ ಪ್ರಾರಂಭಿಸುವಂತೆ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಅಧ್ಯಕ್ಷರು ಮಾತನಾಡಿ ದಿ. 10.06.2008 ರಂದು ಕರ್ನಾಟಕದ ಹಾವೇರಿ ಜಿಲ್ಲೆಯಲ್ಲಿ ಪೋಲೀಸ್ ಗೋಲಿಬಾರ್ ನಲ್ಲಿ ಮೃತಪಟ್ಟ ರೈತನ ಮರಣಾರ್ಥ ಎರಡು ನಿಮಿಷ ಮೌನ ಆಚರಿಸಲು ಸಭೆಯನ್ನು ಕೋರಲಾದ ಮೇರೆಗೆ ಸಭೆಯು ಎರಡು ನಿಮಿಷ ಎದ್ದು ನಿಂತು ಮೌನ ಆಚರಿಸಿತು. ನಂತರ ಭಗವಂತನು ಮೃತರ ಕುಟುಂಬಕ್ಕೆ ದುಃಖ ತಡೆಯುವ ಶಕ್ತಿ ನೀಡಲೆಂದು ಪ್ರಾರ್ಥಿಸಲಾಯಿತು.

ವಿಷಯ 1- ದಿನಾಂಕ 03.03.2008, 26.03.208 ಮತ್ತು 27.03.2008 ರಂದು ನಡೆದ ವಿಶೇಶ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ 1- ವಿಷಯದಲ್ಲಿ ವಿವರಿಸಿರುವ ದಿ. 03.03.2008, 26.03.2008 ಮತ್ತು 27.03.2008 ರಂದು ಸಭೆಯ ನಡವಳಿಗಳನ್ನು ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು.

| | ಜನನ | | | ಮರಣ | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಜನವರಿ 2008 | 115 | 129 | 244 | 28 | 14 | 42 |
| ಫೆಬ್ರವರಿ 2008 | 117 | 99 | 216 | 35 | 07 | 42 |
| ಮಾರ್ಚ್ 2008 | 126 | 111 | 237 | 26 | 14 | 40 |
| ಏಪ್ರಿಲ್ 2008 | 123 | 135 | 258 | 26 | 12 | 38 |

ವಿಷಯ 2- 2008 ನೇ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಮಾಹೆಯ ಜನನ ಮತ್ತು ಮರಣ ತಃಖ್ತೆಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ-2 – 2008ನೇ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಮಾಹೆಗಳ ಜನನ ಮತ್ತು ಮರಣ ತಃಖ್ತೆಯನ್ನು ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ 3- 2008ನೇ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಮಾಹೆಯ ಜಮಾ ಮತ್ತು ಖರ್ಚಿನ ತಃಖ್ತೆಯನ್ನು ಓದಿ ಅಂಗೀಕರಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 3- ವಿಷಯದಲ್ಲಿ ವಿವರಿಸಿರುವ 2008ನೇ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಮಾಹೆಗಳ ಜಮಾ ಖರ್ಚಿನ ಪರಿಶೀಲಿಸಿ ಓದಿ ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಿಷಯ4 (ಅ)- ಸರ್ಕಾರಿ ಸುತ್ತೋಲೆ ಮತ್ತು ಪ್ರಪತ್ರಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ವ್ಯವಸ್ಥಾಪಕ ನಿರ್ದೇಶಕರು ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತರವರ ಪತ್ರದ ದಿ. 19.12.2007 ರಂತೆ ಪ್ರಕಾರ ನಗರಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಟ್ಟಡಗಳು, ಖಾಸಗಿ ಹೋಟೆಲ್ ಗಳು ಇತ್ಯಾದಿಗಳಿಗೆ ಸೋಲಾರ್ ವಾಟರ್ ಹೀಟರ್ ನ್ನು ಕಡ್ಡಾಯಗೊಳಿಸುವ ಸೂಚನೆ ನೀಡಿದ್ದು, ನಗರಸಭಾ ವ್ಯಾಪ್ತಿಯಲ್ಲಿ ಕಡ್ಡಾಯಗೊಳಿಸಲು ಕಟ್ಟಡ ಪರವಾನಗಿ ಬೈಲಾಗೆ ತಿದ್ದುಪಡಿ ತರಲು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ. (ನಗರಸಭಾ ವ್ಯಾಪ್ತಿಯಲ್ಲಿ ಸೋಲಾರ್ ವಾಟರ್ ಹೀಟರ್ ಬಳಸಲು ಕಡ್ಡಾಯಪಡಿಸಿದ ಪಕ್ಷದಲ್ಲಿ ರೂ. 5.00 ಲಕ್ಷಗಳನ್ನು ಸೋಲಾರ್ ಗೆ ಕೈಪಿಡಿ ಮುದ್ರಿಸಲು ಹಾಗೂ ಜಾಹಿರಾತಿಗಾಗಿ ಬಿಡುಗಡೆಗೊಳಿಸುವುದಾಗಿ ತಿಳಿಸಿರುತ್ತಾರೆ)

ತೀರ್ಮಾನ 4(ಅ)- ವಿಷಯದಲ್ಲಿ ವಿವರಿಸಿರುವ ಪತ್ರವನ್ನು ಸಭೆಯ ಮುಂದೆ ಓದಿ ತಿಳಿಸಲಾಯಿತು. ನಗರಸಭೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಟ್ಟಡಗಳು, ಖಾಸಗಿ ಹೋಟೆಲ್ ಗಳು, ಇತ್ಯಾದಿಗಳಿಗೆ ಸೋಲಾರ್ ವಾಟರ್ ಹೀಟರ್ ನ್ನು ಕಡ್ಡಾಯಗೊಳಿಸಲು ಕಟ್ಟಡ ಪರವಾನಗಿ ಬೈಲಾಗಿ ತಿದ್ದುಪಡಿ ತರತಕ್ಕದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮೇಲ್ಕಂಡಂತೆ ಸೋಲಾರ್ ವಾಟರ್ ಹೀಟರ್ ಕಡ್ಡಾಯಗೊಳಿಸುವುದನ್ನು ವರದಿಸಿ ಜಾಹಿರಾತು ಮತ್ತು ಕೈಪಿಡಿ ಮುದ್ರಿಸಲು ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಮಾಡುವಂತೆ ಕೋರುವುದೆಂದು ತೀರ್ಮಾನಿಸಲಾಯಿತು.

ವಿಷಯ (ಆ)- ಪೌರಾಡಳಿತ ನಿರ್ದೇಶನಾಲಯದ ಪತ್ರದ ಸಂಖ್ಯೆ ಪೌನಿ-ಎಂ.ಆರ್.ಸಿ-ಸಿಆರ್-9-2005-06, ದಿ. 12.03.2008 ರ ಮೂಲಕ ಕರ್ನಾಟಕ ಮುನಿಸಿಪಲ್ ಡಾಟಾ ಸೋಸೈಟಿ ಇಲ್ಲಿಗೆ 2007-08 ನೇ ಸಾಲಿಗೆ ಪ್ರಾರಂಭಿಕ ಸದಸ್ಯತ್ವ ಶುಲ್ಕ ರೂ. 1.00 ಲಕ್ಷಗಳನ್ನು ಮತ್ತು ವಾರ್ಷಿಕ ಚಂದಾ 10.000-00 ರೂ. ಗಳನ್ನು ಪಾವತಿಸಲು ಕೋರಿರುವ ಮೇರೆಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 4 (ಆ)- ಪೌರಾಡಳಿತ ನಿರ್ದೇಶನಾಲಯದಿಂದ ಬಂದ ಪತ್ರವನ್ನು ಸಬೆಗೆ ಓದಿ ವಿವರಿಸಲಾಯಿತು. ನಂತರ ಸಭೆಯು ವಿಷಯವನ್ನು ಪರಿಶೀಲಿಸಿ ಸದಸ್ಯತ್ವ ಶುಲ್ಕ ಮತ್ತು ವಾರ್ಷಿಕ ಚಂದಾವನ್ನು ಈ ಸಂಸ್ಥೆಗೆ ಬಿಡುಗಡೆಯಾಗುವ ಎಸ್.ಎಫ್. ಸಿ ಅನುದಾನದಲ್ಲಿ ಮುರಿದುಕೊಳ್ಳುವಂತೆ ಪೌರಾಡಳಿತ ನಿರ್ದೇಶಕರ ರವರನ್ನು ಕೋರಿಕೊಳ್ಳುವುದೆಂದು ತೀರ್ಮಾನಿಸಲಾಯಿತು.

ವಿಷಯ5- ಕಛೇರಿಯ ಸುಗಮ ಕೆಲಸ ಕಾರ್ಯಗಳಿಗೆ ಅನುಕೂಲವಾಗಲು ಇಂಟರ್ ಕಾಮ್ ಅಳವಡಿಸಿರುವುದನ್ನು ಅನುಮೋದಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 5- ಕಛೇರಿಯ ಸುಗಮ ಕೆಲಸ ಕಾರ್ಯಗಳಿಗೆ ನಿಯಾಮಾನುಸಾರ ಕ್ರಮ ವಹಿಸಿ ಇಂಟರ್ ಕಾಮ್ ಅಳವಡಿಸಿರುವ ರೂ. 49497-00 ಗಳ ಖರ್ಚನ್ನು ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಿಷಯ 6- ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಕುಟುಂಬಗಳಿಗೆ ಪರಿಹಾರ ಪಾವತಿಸಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 6- ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಕುಟುಂಬಗಳಿಗೆ ಪರಿಹಾರ ನೀಡಿರುವುದನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು. ಇನ್ನು ಮುಂದೆ ಅಧ್ಯಕ್ಷರ ಮತ್ತು ಪೌರಾಯುಕ್ತರು ಪ್ರಕೃತಿ ವಿಕೋಪಕ್ಕೆ ಹಾನಿ ಆಗಿರುವುದನ್ನು ಅನುಸರಿಸಿ ತಮ್ಮ ವಿವೇಚನೆಗಳಿಗುನುಗುಣವಾಗಿ ಮಂಜೂರು ಮಾಡುವ ಅಧಿಕಾರವನ್ನು ಹಸ್ತಾಂತರಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 7- ನಗರಸಭೆಯಿಂದ ಕೆಳಕಂಡ ಬಾಬುಗಳಿಗೆ 2007-08ನೇ ಸಾಲಿಗೆ ವಾರ್ಷಿಕ ಟೆಂಡರ್ ಕರೆದು ನಿರ್ವಹಣೆಯಾಗುತ್ತಿದ್ದು, 2008-09ನೇ ಸಾಲಿಗೆ ಟೆಂಡರ್ ನ್ನು ಮುಂದುವರೆಸಲು ಟೆಂಡರ್ ದಾರರ ಕೋರಿರುವ ಬಗ್ಗೆ ಪರಿಶೀಲಿಸುವ ವಿಚಾರ. (ವಿಧಾನಸಭೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದುದ್ದರಿಂದ ಟೆಂಡರ್ ಪ್ರಕ್ರಿಯೆ ನಡೆಸಲು ಸಾಧ್ಯವಾಗಿರುವುದಿಲ್ಲ).

(1) 2007-08ನೇ ಸಾಲಿಗೆ ಮಹೇಶ ಆಪಸೆಟ್ ಪ್ರಿಂಟರ್ಸ್, ಇವರಿಗೆ ಕಛೇರಿಗೆ ಅಗತ್ಯವಾದ ವಿವಿಧ ವಹಿ, ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಟೆಂಡರ್ ದೊರೆತಿದ್ದು, ಎಲ್ಲಾ ವಸ್ತುಗಳ ಬೆಲೆ ಜಾಸ್ತಿಯಾಗಿರುವುದರಿಂದ 2008-09 ನೇ ಸಾಲಿಗೆ ಶೇ. 12 ರಷ್ಟು ಹಾಲಿ ಮಂಜೂರಾಗಿರುವ ದರಕ್ಕೆ ಹೆಚ್ಚಿಸಿ ಮಂಜೂರು ಮಾಡಿಕೊಡಲು ಕೋರಿರುವ ವಿಚಾರ.

ತೀರ್ಮಾನ 7 (1)- ಕಡತವನ್ನು ಪರಿಶೀಲಿಸಲಾಯಿತು. ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಮೇಲ್ಕಂಡ ಕಾರಣದಿಂದ ವಿಳಂಬವಾಗಿರುವುದರಿಂದ, ಜಾಹಿರಾತು ಖರ್ಚು ಮತ್ತು ಮಾರ್ಕೆಟ್ ನಲ್ಲಿ ಎಲ್ಲಾ ಸಾಮಗ್ರಿಗಳ ಬೆಲೆ ಜಾಸ್ತಿಯಾಗಿರುವುದರಿಂದ ಟೆಂಡರ್ ಕರೆದಲ್ಲಿ ಹೆಚ್ಚಿನ ದರಕ್ಕೆ ಟೆಂಡರ್ ಬರುವ ಸಾದ್ಯತೆ ಇರುವುದರಿಂದ ಹಿಂದಿನ ಟೆಂಡರ್ ದಾರರನ್ನೇ, ಹಿಂದಿನ ಟೆಂಡರ್ ದರಕ್ಕೆ ಶೇ. 5 ಹೆಚ್ಚಿಗೆ ನೀಡಿ 2008-09ನೇ ಸಾಲಿಗೆ ಮುಂದುವರೆಸುವುದೆಂದು (ಏಪ್ರಿಲ್ 2008 ರಿಂದ ಜಾರಿಗೆ ಬರುವಂತೆ) ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 7 (2) - 2007-08ನೇ ಸಾಲಿನಲ್ಲಿ ಸಹಾಯವಾಣಿ (ಹೆಲ್ಪ್ ಲೈನ್) 24 ಘಂಟೆ ನಿರ್ವಹಣೆ ಕೆಲಸವನ್ನು ಪೀಪಲ್ಸ್ ಆಕ್ಸನ್ ಅಂಡ್ ರೂರಲ್ ಡೆವಲಪ್ ಮೆಂಟ್ ಸೋಸೈಟಿ ಬೆಂಗಳೂರು ಇವರಿಗೆ ನಿಯಾಮಾನುಸಾರ ನೀಡಿದ್ದು, ಸದರಿಯವರು ಮನವಿ ಸಲ್ಲಿಸಿ ಶೇ. 25 ನ್ನು ಹಾಲಿ ಟೆಂಡರ್ ದರಕ್ಕೆ ಹೆಚ್ಚಿಸಿ 2008-09ನೇ ಸಾಲಿಗೆ ಮುಂದುವರಿಸಿಕೊಡಲು ಕೋರಿರುವ ವಿಚಾರ ಪರಿಶೀಲನೆ (ಮಾಹೆಯಾನ ರೂ. 10.500 ಗಲಿಗೆ ಹಿಂದಿನ ವರ್ಷ ಮಂಜೂರಾತಿ ನೀಡಲಾಗಿತ್ತು)

PDF Created with deskPDF PDF Writer - Trial :: http://www.docudesk.com

ತೀರ್ಮಾನ 7 (2)- ಕಡತವನ್ನು ಪರಿಶೀಲಿಸಲಾಯಿತು. ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಮೇಲ್ಕಂಡ ಕಾರಣದಿಂದ ವಿಳಂಬವಾಗಿರುವುದರಿಂದ, ಜಾಹಿರಾತು ಖರ್ಚು ಮತ್ತು ಟೆಂಡರ್ ಕರೆದಲ್ಲಿ ಹೆಚ್ಚಿನ ದರಕ್ಕೆ ಟೆಂಡರ್ ಬರುವ ಸಾಧ್ಯತೆ ಇರುವುದರಿಂದ ಹಿಂದಿನ ಟೆಂಡರ್ ದಾರರನ್ನೇ, ಹಿಂದಿನ ಟೆಂಡರ್ ದರಕ್ಕೆ ಶೇ. 8 ಹೆಚ್ಚಿಗೆ ನೀಡಿ 2008-09ನೇ ಸಾಲಿಗೆ ಮುಂದುವರೆಸುವುದೆಂದು (ಏಪ್ರಿಲ್ 2008 ರಿಂದ ಜಾರಿಗೆ ಬರುವಂತೆ) ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 7 (3) - ಒಲಂಪಿಕ್ ಸೆಕ್ಯೂರಿಟಿ ಸರ್ವಿಸ್, ರಾಮನಗರ ಇವರಿಗೆ 2006-07 ರಲ್ಲಿ ಐಡಿಎಸ್ಎಂಟಿ ಕಟ್ಟಡಕ್ಕೆ ಬೆಳಗಿನ ಪಾಳಿಗೆ ಒಬ್ಬರು ಮತ್ತು ರಾತ್ರಿ ಪಾಳಿಗೆ ಒಬ್ಬರಂತೆ ಸೆಕ್ಯೂರಿಟಿ ಒದಗಿಸಲು ಮಾಹೆಯಾನ ರೂ. 6200-00 ಗಳಿಗೆ ಟೆಂಡರ್ ನೀಡಲಾಗಿತ್ತು. ನಂತರ 2007-08ನೇ ಸಾಲಿಗೆ ಶೇ. 20 ರಷ್ಟು ಜಾಸ್ತಿ ಮಾಡಿ ಬೆಳಗಿನ ಪಾಳಿಗೆ ಒಬ್ಬರು ರಾತ್ರಿ ಪಾಳಿಗೆ ಇಬ್ಬರಂತೆ ಒಟ್ಟು ರೂ. 9920-00 ರಂತೆ ಸಭೆ ಠರಾವು 151 ದಿ. 30.03.2007 ರಂತೆ ಮಂಜೂರಾತಿಸಲಾಗಿತ್ತು. ಸದರಿಯವರು 2008-09 ಕ್ಕೆ ಮುಂದುವರಿಸಿಕೊಡಲು ಕೋರಿ (ಹಾಲಿ ನೀಡುತ್ತಿರುವ ಟೆಂಡರ್ ದರಕ್ಕೆ ಶೇ. 20 ಹೆಚ್ಚಿಸಿ) ದಿ. 28.02.2008 ರಂದು ಮನವಿ ಸಲ್ಲಿಸಿದ್ದು, ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ

ತೀರ್ಮಾನ 7 (3)- ಕಡತವನ್ನು ಪರಿಶೀಲಿಸಲಾಯಿತು. ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಮೇಲ್ಕಂಡ ಕಾರಣದಿಂದ ವಿಳಂಬವಾಗಿರುವುದರಿಂದ, ಜಾಹಿರಾತು ಖರ್ಚು ಮತ್ತು ಟೆಂಡರ್ ಕರೆದಲ್ಲಿ ಹೆಚ್ಚಿನ ದರಕ್ಕೆ ಟೆಂಡರ್ ಬರುವ ಸಾಧ್ಯತೆ ಇರುವುದರಿಂದ ಹಿಂದಿನ ಟೆಂಡರ್ ದಾರರನ್ನೇ, ಹಿಂದಿನ ಟೆಂಡರ್ ದರಕ್ಕೆ ಶೇ. 8 ಹೆಚ್ಚಿಗೆ ನೀಡಿ 2008-09ನೇ ಸಾಲಿಗೆ ಮುಂದುವರೆಸುವುದೆಂದು (ಏಪ್ರಿಲ್ 2008 ರಿಂದ ಜಾರಿಗೆ ಬರುವಂತೆ) ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 7 (4)- 2007-08ನೇ ಸಾಲಿನಗೆ ನೈರ್ಮಲ್ಯ ಶಾಖೆಗೆ ಬೇಕಾದ ರಾಸಾಯನಿಕ ಮತ್ತು ಔಷಧಿಯನ್ನು ಮೈಸೂರು ಕೆಮಿಕಲ್ಸ್ ಅಂಡ್ ಮಾರ್ಕೆಟಿಂಗ್ ಕಂಪನಿ ಕುಣಿಗಲ್ ಇವರಿಂದ ಸರಬರಾಜು ಪಡೆಯಲಾಗುತ್ತಿತ್ತು. ಸದರಿಯವರು ದಿ. 01.03.2008 ರಂದು ಅರ್ಜಿ ನೀಡಿ ಎಲ್ಲಾ ಕಚ್ಚಾ ಸಾಮಾಗ್ರಿಗಳ ದರವು ಟೆಂಡರ್ ದರಕ್ಕೆ ಶೇ. 30 ಜಾಸ್ತಿಯಾಗಿರುವುದರಿಂದ ಶೇ. 30 ರಷ್ಟು ದರ ಜಾಸ್ತಿ ಮಾಡಿ ಮಂಜೂರಾತಿಸಿಕೊಡಲು ಕೋರಿರುವ ಮೇರೆಗೆ ಪರಿಶೀಲಿಸುವ ವಿಚಾರ.

ತೀರ್ಮಾನ 7 (4)- ಕಡತವನ್ನು ಪರಿಶೀಲಿಸಲಾಯಿತು. ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಮೇಲ್ಕಂಡ ಕಾರಣದಿಂದ ವಿಳಂಬವಾಗಿರುವುದರಿಂದ, ಜಾಹಿರಾತು ಖರ್ಚು ಮತ್ತು ಮಾರ್ಕೆಟ್ ನಲ್ಲಿ ಎಲ್ಲಾ ಸಾಮಗ್ರಿಗಳ ಬೆಲೆ ಜಾಸ್ತಿಯಾಗಿರುವುದರಿಂದ ಟೆಂಡರ್ ಕರೆದಲ್ಲಿ ಹೆಚ್ಚಿನ ದರಕ್ಕೆ ಟೆಂಡರ್ ಬರುವ ಸಾಧ್ಯತೆ ಇರುವುದರಿಂದ ಹಿಂದಿನ ಟೆಂಡರ್ ದಾರರನ್ನೇ, ಹಿಂದಿನ ಟೆಂಡರ್ ದರಕ್ಕೆ ಶೇ. 7 ಹೆಚ್ಚಿಗೆ ನೀಡಿ 2008-09ನೇ ಸಾಲಿಗೆ ಮುಂದುವರೆಸುವುದೆಂದು(ಏಪ್ರಿಲ್ 2008 ರಿಂದ ಜಾರಿಗೆ ಬರುವಂತೆ) ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

PDF Created with deskPDF PDF Writer - Trial :: http://www.docudesk.com

ವಿಷಯ 7 (5)- 2007-08ನೇ ಸಾಲಿನ ಕಛೇರಿಗೆ ಸ್ಟೇಷನರಿಯನ್ನು ಶ್ರೀ. ಬಾಲಾಜಿ ಸ್ಟೋರ್, ರಾಮನಗರ ಇವರಿಂದ ಸರಬರಾಜು ಪಡೆಯಲಾಗುತ್ತಿದ್ದು, ಸದರಿಯವರು ದಿ. 01.03.2008 ರಂದು ಅರ್ಜಿ ಸಲ್ಲಿಸಿ ಹಾಲಿ ಸರಬರಾಜು ಮಾಡುತ್ತಿರುವ ಸ್ಟೇಶನರಿ ಟೆಂಡರ್ ದರವು ಕಳೆದ ಮೂರು ವರ್ಷ ಹಿಂದಿನ ಟೆಂಡರ್ ದರಗಳಾಗಿದ್ದು, ಇದರಿಂದ ಸ್ಟೇಶನರಿ ಸರಬರಾಜು ಮಾಡಲು ತೊಂದರೆಯಾಗುತ್ತಿದ್ದು, ಶೇ. 20 ರಷ್ಟು ಹೆಚ್ಚು ಟೆಂಡರ್ ದರಕ್ಕೆ ಮಂಜೂರಾತಿಸಿಕೊಡಲು ಕೋರಿರುವ ವಿಚಾರ ಪರಿಶೀಲನೆ.

ತೀರ್ಮಾನ 7 (5)- ಕಡತವನ್ನು ಪರಿಶೀಲಿಸಲಾಯಿತು. ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಮೇಲ್ಕಂಡ ಕಾರಣದಿಂದ ವಿಳಂಬವಾಗಿರುವುದರಿಂದ, ಜಾಹಿರಾತು ಖರ್ಚು ಮತ್ತು ಮಾರ್ಕೆಟ್ ನಲ್ಲಿ ಎಲ್ಲಾ ಸಾಮಗ್ರಿಗಳ ಬೆಲೆ ಜಾಸ್ತಿಯಾಗಿರುವುದರಿಂದ ಟೆಂಡರ್ ಕರೆದಲ್ಲಿ ಹೆಚ್ಚಿನ ದರಕ್ಕೆ ಟೆಂಡರ್ ಬರುವ ಸಾಧ್ಯತೆ ಇರುವುದರಿಂದ ಹಿಂದಿನ ಟೆಂಡರ್ ದಾರರನ್ನೇ, ಹಿಂದಿನ ಟೆಂಡರ್ ದರಕ್ಕೆ ಶೇ. 7 ಹೆಚ್ಚಿಗೆ ನೀಡಿ 2008-09ನೇ ಸಾಲಿಗೆ ಮುಂದುವರೆಸುವುದೆಂದು (ಏಪ್ರಿಲ್ 2008 ರಿಂದ ಜಾರಿಗೆ ಬರುವಂತೆ) ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು

ವಿಷಯ 7 (6)- 2007-08ನೇ ಸಾಲಿಗೆ ಡಾಟಾ ಎಂಟ್ರಿಗಾಗಿ ಮಾಹೆಯಾನ ರೂ. 8050-00 ಗಳಿಗೆ ಡಾಟಾಕಾನ್ ಬೆಂಗಳೂರುರವರಿಗೆ ಮಂಜೂರು ಆಗಿದ್ದು, ದಿ. 27.02.2008 ರಂದು ಪತ್ರ ಸಲ್ಲಿಸಿ 2008-09 ನೇ ಸಾಲಿಗೆ ಹಾಲಿ ಇರುವ ಟೆಂಡರ್ ದರಕ್ಕೆ ಶೇ. 25 ರಷ್ಟನ್ನು ಹೆಚ್ಚಿಸಿ ಮಂಜೂರಾತಿಸಿಕೊಡಲು ಕೋರಿರುವ ವಿಚಾರ ಪರಿಶೀಲನೆ.

ತೀರ್ಮಾನ 7 (6)- ಕಡತವನ್ನು ಪರಿಶೀಲಿಸಲಾಯಿತು. ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಮೇಲ್ಕಂಡ ಕಾರಣದಿಂದ ವಿಳಂಬವಾಗಿರುವುದರಿಂದ, ಜಾಹಿರಾತು ಖರ್ಚು ಮತ್ತು ಟೆಂಡರ್ ಕರೆದಲ್ಲಿ ಹೆಚ್ಚಿನ ದರಕ್ಕೆ ಟೆಂಡರ್ ಬರುವ ಸಾಧ್ಯತೆ ಇರುವುದರಿಂದ ಹಿಂದಿನ ಟೆಂಡರ್ ದಾರರನ್ನೇ, ಹಿಂದಿನ ಟೆಂಡರ್ ದರಕ್ಕೆ ಶೇ. 8 ಹೆಚ್ಚಿಗೆ ನೀಡಿ 2008-09ನೇ ಸಾಲಿಗೆ ಮುಂದುವರೆಸುವುದೆಂದು (ಏಪ್ರಿಲ್ 2008 ರಿಂದ ಜಾರಿಗೆ ಬರುವಂತೆ) ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 8- ಸರ್ಕಾರದ ಆದೇಶ ನಅಇ-50-ಎಸ್ ಎಫ್ ಸಿ-2007, ದಿ. 06.03.2008 ರ ಮೂಲಕ 2007-08ನೇ ಸಾಲಿಗೆ ಎಸ್.ಎಫ್. ಸಿ ಅನುದಾನದಡಿ ಬಿಡುಗಡೆಯಾಗಿರುವ ಪ್ರೋತ್ಸಾಹ ಅನುದಾನ ರೂ. 36.67 ಲಕ್ಷಗಳನ್ನು ಎಸ್.ಎಫ್. ಸಿ ಮುಕ್ತನಿಧಿ ಅನುದಾನವನ್ನು ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಾತ್ರ ಬಳಸಲು ನಿರ್ದೇಶನ ನೀಡಲಾಗಿರುತ್ತದೆ. 2006-07ನೇ ಸಾಲಿನಲ್ಲಿ ಬಿಡುಗಡೆಯಾದ ಮುಕ್ತನಿಧಿ ಅನುದಾನ ಪೂರ್ಣ ಮುಗಿದಿದ್ದು, ಇನ್ನು ಹಲವಾರು ಕಾಮಗಾರಿಗಳ ಬಿಲ್ಲು ಬಾಕಿ ಇರುತ್ತದೆ. ಕಾಮಗಾರಿ ಬಿಲ್ಲುಗಳನ್ನು ಪಾವತಿಸಲೇಬೇಕಾದ್ದರಿಂದ ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದಿದ್ದರೂ ಕೂಡ ನಗರಸಭೆ ನಿಧಿಯಿಂದ ಫೆಬ್ರವರಿ 2008 ರವರೆಗೆ ರೂ. 21.69 ಲಕ್ಷಗಳನ್ನು ಪಾವತಿಸಲಾಗಿದೆ. ಇದರಿಂದ ನಗರಸಭೆಯ ಸುಮಾರು ರೂ. 15.00 ಲಕ್ಷಗಳನ್ನು ಪಾವತಿಸಲಾಗಿದೆ. ಇದರಿಂದ ನಗರಸಭೆಯ ಸುಮಾರು ರೂ. 15.00 ಲಕ್ಷಗಳ ಬಿಲ್ಲುಗಳು ಬಾಕಿ ಇರುವುದಲ್ಲದೇ ನಗರಸಬಾ ನಿಧಿಯಲ್ಲಿ ಜನವರಿ 2008ರ ಅಂತ್ಯಕ್ಕೆ ಸುಮಾರು ರೂ. 12.50 ಲಕ್ಷಗಳ ಖೋತವಾಗಿರುತ್ತದೆ. ಅಲ್ಲದೇ ಹಾಲಿ ಕೆಲಸ ನಿರ್ವಹಿಸುತ್ತಿರುವುದನ್ನು ಬಿಟ್ಟು ಮುಕ್ತನಿಧಿಯ ಸುಮಾರು ರೂ. 8.00 ಲಕ್ಷಗಳ ಬಿಲ್ಲು ಕಚೇರಿಯಲ್ಲಿ ಬಾಕಿ

PDF Created with deskPDF PDF Writer - Trial :: http://www.docudesk.com

ಇರುತ್ತದೆ. ಸರ್ಕಾರದ ಸುತ್ತೋಲೆ ನಅಇ 28-ಎಸ್.ಎಫ್.ಸಿ-2006, ದಿ. 17.06.2006 ರ ಪ್ರಕಾರ ಮುಕ್ತನಿಧಿ ಬಳಸಲು ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಕೌನ್ಸಿಲ್ ಗೆ ನೀಡಿರುವುದರಿಂದ ಮೇಲ್ಕಂಡಂತೆ ಬಿಡುಗಡೆಯಾಗಿರುವ ಅನುದಾನವನ್ನು ಈ ಬಾಬಿಗೆ ಉಪಯೋಗಿಸಿಕೊಳ್ಳಲು ಮತ್ತು ಮುಂದೆ ಬರುವ ಮುಕ್ತನಿಧಿ ಬಿಲ್ಲುಗಳನ್ನು ಪಾವತಿಸಲು ಅನುಮೋದನೆ ನೀಡುವ ವಿಚಾರ.

ತೀರ್ಮಾನ 8- ವಿಷಯದ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿ 2007-08ನೇ ಸಾಲಿಗೆ ಎಸ್.ಎಫ್.ಸಿ ಅನುದಾನದಡಿ ಬಿಡುಗಡೆಯಾಗಿರುವ ಪ್ರೋತ್ಸಾಹ ಧನ ರೂ. 36.67 ಲಕ್ಷಗಳನ್ನು ಈಗಾಗಲೇ ಖರ್ಚು ನಿರ್ವಹಿಸಿರುವ ಕಾಮಗಾರಿ ಬಲ್ಲುಗಳಿಗೆ ಹೊಂದಾಣಿಕೆ ಮಾಡಿಕೊಂಡಿರುವುದನ್ನು ಒಪ್ಪಬಹುದೆಂದು ಹಾಗೂ ಉಳಿಕೆ ಅನುದಾನವನ್ನು ವಿಷಯದಲ್ಲಿ ವಿವರಿಸಿರುವ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 9- ಸರ್ಕಾರದ ಆದೇಶ ಸಂ. ಪೌನಿ-ಇತರೇ-04-2004-05, ದಿ. 15.06.2004 ಪ್ರಕಾರ ಕಛೇರಿ ಉಪಯೋಗಕ್ಕೆ 2008-09ನೇ ಸಾಲಿಗೆ ಕ್ವಾಲೀಸ್ ವಾಹನವನ್ನು ಪಡೆಯುವ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ. ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಹಾಲಿ ವಾಹನವನ್ನು ಮುಂದುವರೆಸುವ ಬಗ್ಗೆ ಅನುಮೋದನೆ ನೀಡುವ ವಿಚಾರ.

ತೀರ್ಮಾನ 9- ವಿಷಯವನ್ನು ಪರಿಶೀಲಿಸಲಾಯಿತು. ಕಛೇರಿಯ ಉಪಯೋಗಕ್ಕಾಗಿ 2008-09ನೇ ಸಾಲಿಗೆ ಹೆಚ್ಚಿನ ಸ್ಥಳಾವಕಾಶವಿರುವ ಕಾರಣ ಟಯೋಟಾ ಕ್ವಾಲೀಸ್ ಅಥವಾ ಸಮಕಾಲೀನ ಮಾದರಿಯ ವಾಹನವನ್ನು ಟೆಂಡರ್ ಪ್ರಕ್ರಿಯೆ ನಡೆಸಿ ಮಾಸಿಕ ಬಾಡಿಗೆಯ ಆಧಾರದ ಮೇಲೆ ಪಡೆಯಬಹುದೆಂದು ಸೂಚಿಸುತ್ತಾ ಟೆಂಡರ್ ಪ್ರಕ್ರಿಯೆ ಮುಗಿಸಿ ಹೊಸ ವಾಹನ ಪೂರೈಸುವವರೆಗೆ ಈ ಹಿಂದೆ ಇದ್ದ ದರಗಳಂತೆ ಮ. ಅಕ್ಷಯ್ ಟೂರ್ಸ್ ಅಂಡ್ ಟ್ರಾವೆಲ್ಸ್ ರವರ ವಾಹನವನ್ನು ಮುಂದುವರೆಸಬಹುದೆಂದು ಅನುಮೋದನ ನೀಡಿತು.

ವಿಷಯ 10:- 2008-09ನೇ ಸಾಲಿನ ಆಯ-ವ್ಯಯದಲ್ಲಿ ಶೇ. 18 ರ ನಿಧಿಗೆ ರೂ. 60.00 ಲಕ್ಷಗಳನ್ನು ಕಾಯ್ದಿರಿಸಿದ್ದು, ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗೆ ಸಲ್ಲಿಸುವ ವಿಚಾರ.

ತೀರ್ಮಾನ 10:- ಶೇ. 18ರ ನಿಧಿಗೆ ಕಾದಿರಿಸಿದ 60.00 ಲಕ್ಷಗಳಿಗೆ ತಯಾರಿಸಿರುವ ಕ್ರಿಯಾ ಯೋಜನೆಯನ್ನು ಸಭೆಯ ಗಮನಕ್ಕೆ ತರಲಾಯಿತು. ನಂತರ ಸಭೆಯು ಸುದೀರ್ಘವಾಗಿ ಚರ್ಚಿಸಿ ಕೆಲವು ಮಾರ್ಪಾಡುಗಳೊಡನೆ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸರ್ವಾನುಮತದಿಂದ ಒಪ್ಪಿ ಮಂಜೂರು ಮಾಡಲಾಯಿತು. ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲು ಪೌರಾಯುಕ್ತರಿಗೆ ತಿಳಿಸಲಾಯಿತು.

PDF Created with deskPDF PDF Writer - Trial :: http://www.docudesk.com

ರೂ. ಲಕ್ಷಗಳಲ್ಲಿ

| ಕ್ರ.ಸಂ | ಯೋಜನೆಗಳ ವಿವರ | ಅಂದಾಜು |
|---|---|---|
| 1 | 1. ನಗರಸಭೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಫಲಾನುಭವಿಗಳಿಗೆ ಕಂಪ್ಯೂಟರ್ ತರಭೇತಿಗಾಗಿ 15 ಕಂಪ್ಯೂಟರ್ ಖರೀದಿ 5.25 ಲಕ್ಷಗಳು<br>2. ಕಂಪ್ಯೂಟರ್ ತರಭೇತಿ ಕೊಠಡಿಎಲ್ಲಾ ರೀತಿಯಲ್ಲೂ ವ್ಯವಸ್ಥೆಗೊಳಿಸಲು (ಪೀಠೋಪಕರಣ, ವೈರಿಂಗ್, ಇತ್ಯಾದಿ) 13.10 ಲಕ್ಷಗಳು<br>3. ಬೋಧಕರಿಗೆ ವೇತನ 1.25 ಲಕ್ಷಗಳು | 19.60 |
| 2 | ಸರ್ಕಾರಿ ಹಾಗೂ ಸರ್ಕಾರದ ಅಂಗೀಕೃತ ಶಾಲೆಗಳಲ್ಲಿ 5-10 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಬ್ಯಾಗ್ ಕೊಡಿಸುವುದು. | 2.50 |
| | 1. ಪಿಯುಸಿ ನಂತರ ಉನ್ನತ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಸಹಾಯ ಧನ ನೀಡುವುದು (ಗರಿಷ್ಠ 15000-00) ರೂ. 0.90 ಲಕ್ಷಗಳು<br>2. ನಗರಸಭೆ ವ್ಯಾಪ್ತಿಯಲ್ಲಿ 10 ನೇ ತರಗತಿ ಮತ್ತು ಪಿಯುಸಿ ತರಗತಿಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದು ರೂ.0.45 ಲಕ್ಷಗಳು<br>3. ಉನ್ನತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಮಕ್ಕಳಿಗೆ ತರಭೇತಿ ನೀಡಲು ರೂ.0.40 ಲಕ್ಷಗಳು<br>4. ಉನ್ನತ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಖರೀದಿಸಿ ನೀಡಲು ರೂ. 0.75 ಲಕ್ಷಗಳು | 2.50 |
| 4 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ವ್ಯಾಸಂಗ ಮಾಡುತ್ತಿರುವ ರಾಮಗಿರಿ ಪಾಠಶಾಲೆಗೆ ಪೀಠೋಪಕರಣಗಳನ್ನು ಸರಬರಾಜು ಮಾಡುವುದು | 0.50 |
| 5 | ನಗರಸಭೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡಾವಣೆಗಳಲ್ಲಿರುವ ಸಮುದಾಯ ಭವನಗಳಿಗೆ ಪ್ರತಿದಿನ ನ್ಯೂಸ್ ಪೇಪರ್ ಒದಗಿಸುವುದು ಮತ್ತು ಲೈಬ್ರರಿಗಾಗಿ ಪುಸ್ತಕಗಳನ್ನು ಒದಗಿಸುವುದು. | 2.00 |
| 6 | ಪೌರ ಕಾರ್ಮಿಕರ ಕಾಲೋನಿಯಲ್ಲಿರುವ ಅಂಬೇಡ್ಕರ್ ಭವನದ ಮೇಲೆ ಅಂಗನವಾಡಿ ನಿರ್ಮಾಣ ಮಾಡುವುದು. | 2.50 |
| 7 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರುಗಳಿಗೆ ಕುಟುಂಬ ನಿರ್ವಹಣೆಗಾಗಿ ಬ್ಯಾಂಕ್/ ನಿಗಮಗಳ ಮೂಲಕ ವಾಹನಗಳ ಬಾಡಿಗೆ ಉದ್ದೇಶಕ್ಕಾಗಿ ಸಾಲ ಪಡೆದು ವಾಹನ ಖರೀದಿಸುವವರಿಗೆ ಸಾಲದ ಮೇಲೆ ಶೇ 15 ರಷ್ಟು ಸಹಾಯ ಧನ ನೀಡುವುದು.(ಗರಿಷ್ಠ 15 ಸಾವಿರ ಮೀರಬಾರದು) | 13.00 |
| 8 | ಪ್ರಕೃತಿ ವಿಕೋಪಕ್ಕೊಳಗಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪರಿಹಾರ ಧನ ನೀಡುವುದು. | 0.50 |
| 9 | ಆಶ್ರಯ ಯೋಜನೆಯಡಿ ಸಾಲ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಂದು ಕುಟುಂಬಕ್ಕೆ ರೂ. 5000-00 ರಂತೆ ಸಹಾಯ ಧನ ನೀಡುವುದು. | 5.00 |

PDF Created with deskPDF PDF Writer - Trial :: http://www.docudesk.com

| | | |
|---|---|---|
| 10 | ಅನಾರೋಗ್ಯದಿಂದ ಬಳಲುವ (ಹೃದಯ ಖಾಯಿಲೆ, ಕ್ಯಾನ್ಸರ್, ಇತ್ಯಾದಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಚಿಕಿತ್ಸೆ ಪಡೆಯಲು (ಒಬ್ಬರಿಗೆ ಗರಿಷ್ಠ ರೂ. 25000-00) | 3.00 |
| 11 | ದಲಿತ ಸಂಘರ್ಶ ಸಮಿತಿ ರಾಮನಗರ ಶಾಖೆ ಇವರಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡುವುದು | 0.50 |
| 12 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ವಂತ ಮನೆ ಹೊಂದಿರುವ ಯುಜಿಡಿ ಸಂಪರ್ಕ ಪಡೆಯಲು ಮುಂದೆ ಬಂದವರಿಗೆ ಕೆಯುಡಬ್ಲ್ಯೂಎಸ್ ಅಂಡ್ ಡಿಬಿ ಇಲಾಖೆಗೆ ಠೇವಣಿ ಇಡಲು | 3.00 |
| 13 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ವಂತ ಮನೆ ಹೊಂದಿರುವ ಕೊಳಾಯಿ ಸಂಪರ್ಕ ಪಡೆಯಲು ಮುಂದೆ ಬಂದವರಿಗೆ ಕೆಯುಡಬ್ಲ್ಯೂಎಸ್ ಅಂಡ್ ಡಿಬಿ ಇಲಾಖೆಗೆ ಠೇವಣಿ ಮಾಡಲು | 3.40 |
| 14 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಡಾವಣೆಗಳಲ್ಲಿ ಸಮುದಾಯ ಭವನಗಳ ಅಭಿವೃದ್ಧಿಗಾಗಿ | 2.00 |
| | **ಒಟ್ಟು** | **60.00** |

ವಿಷಯ 11- ದಿ. 24.08.2006 ರಂದು ರೂ. 10.000-00 ಮುಂಗಡ ಪಾವತಿಸಿ ಐ.ಡಿ.ಎಸ್.ಎಂ.ಟಿ ಕಾಂಪ್ಲೆಕ್ಸ್ ಮಳಿಗೆ ಸಂ. 34 ನ್ನು ರೂ. 152000-00 ರೂ. ಗಳಿಗೆ ಬಿಡ್ಡು ಮಾಡಿ ಉಳಿಕೆ ಹಣ ಪಾವತಿಸುವಂತೆ ಬಿಡ್ ದಾರರಿಗೆ ನೋಟೀಸ್ ನೀಡಿದ್ದರೂ ಸಹ ಉಳಿಕೆ ಹಣ ರೂ. 142000-00 ಪಾವತಿಸದ ಮೇರೆಗೆ ಸದರಿ ಬಿಡ್ ನ್ನು ರದ್ದುಪಡಿಸಿ ದಿ. 27.00.2007 ರಲ್ಲಿ ಸೇವಾ ಕೇಂದ್ರ ತೆರೆಯಲು ಭಾರತ್ ಸಂಚಾರ್ ನಿಗಮ ನಿಯಮಿತ ರಾಮನಗರ ರವರಿಗೆ ಸದರಿ ಮಳಿಗೆ ನೀಡಿದ್ದು, ಸದರಿಯವರು ತಹಲ್ ವರೆವಿಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಬಿಡ್ ನಲ್ಲಿ ಭಾಗವಹಿಸಿರುವ ಶ್ರೀ. ಕೆಂಪೇಗೌಡ ರವರು ಮನವಿ ಸಲ್ಲಿಸಿ ಉಳಿಕೆ ಹಣ ಪಾವತಿಸುವುದಾಗಿ ಕೋರಿರುವುದರಿಂದ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ-11- ವಿಷಯವನ್ನು ಸಭೆಯು ಕೂಲಂಕುಶವಾಗಿ ಚರ್ಚಿಸಿತು. ಟೆಂಡರ್ ಷರತ್ತಿನಂತೆ ಹರಾಜಾದ ನಂತರ ಸರ್ಕಾರದಿಂದ ಮಂಜೂರಾದ 15 ದಿನಗಳಲ್ಲಿ ಪೂರ್ಣ ಟೆಂಡರ್ ಮೊಬಲಗನ್ನು ಜಮಾ ಮಾಡಬೇಕಾಗಿದ್ದು, ಬಿಡ್ ದಾರರು ಜಮಾ ಮಾಡದೇ ಇದ್ದುದ್ದರಿಂದ ಸದರಿಯವರೇ ಪ್ರಸ್ತುತ ಜಮಾ ಮಾಡಲು ಮುಂದೇ ಬಂದಿರುವುದರಿಂದ ಹಾಲಿ ಪಾವತಿಸಬೇಕಾಗಿರುವ ಬಿಡ್ ಮೊಬಲಗಿನ ಜೊತೆಗೆ ದಂಡ ರೂ. 25000-00 ಗಳನ್ನು ವಿಧಿಸುವುದೆಂದು ಇಂತಹ ಪ್ರಕರಣಗಳು ಇದ್ದಲ್ಲಿ ಸದರಿ ಬಿಡ್ ದಾರರಿಗೂ ನೋಟೀಸ್ ಜಾರಿ ಮಾಡಿ 15 ದಿನದೊಳಗೆ ಬಿಡ್ ಮೊಬಲಗು ಮತ್ತು ದಂಡವನ್ನು ಜಮಾ ಪಡೆಯುವುದೆಂದು ಈ ಅವಕಾಶ ಮೀರಿದ್ದಲ್ಲಿ ಬಿಡ್ ದಾರರು ಪಾವತಿಸಿರುವ ಪ್ರಾಥಮಿಕ ಠೇವಣಿಯನ್ನು ನಗರಸಭೆಗೆ ಮುಟ್ಟುಗೋಲು ಹಾಕಿಕೊಂಡು ಮರು ಟೆಂಡರ್ ಕರೆಯುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 12- ರಾಮನಗರ ಪಟ್ಟಣದ ಮಧ್ಯಭಾಗದಲ್ಲಿ ಮೈಸೂರು- ಬೆಂಗಳೂರು ರೈಲ್ವೆಲೈನ್ ಹಾದುಹೋಗಿದ್ದು, ರಾಮನಗರದ ಪೂರ್ವ ಭಾಗದ ಸುಮಾರು 9 ವಾರ್ಡಗಳ ನಾಗರೀಕರ ಅನುಕೂಲಕ್ಕಾಗಿ ಬೆಸ್ಕಾಂ ಪಕ್ಕದಲ್ಲಿ ರೈಲ್ವೆಲೈನ್ ಕೆಳಸೇತುವೆ ನಿರ್ಮಿಸಲಾಗಿದು, ಇನ್ನು ಪೂರ್ಣ ಕೆಲಸ ಮುಕ್ತಾಯವಾಗದೇ ಸಾರ್ವಜನಿಕರು ತಿರುಗಾಡಲು ಮುಕ್ತ ಅವಕಾಶ ಮಾಡಿಕೊಡದೇ ಇದ್ದು, ಮಳೆಗಾಲದಲ್ಲಿ ಮಳೆ ನೀರು ನಿಂತು ತುಂಬಾ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಕೆಲಸ ಅರ್ಧಕ್ಕೆ ನಿಂತಿರುವ

PDF Created with deskPDF PDF Writer - Trial :: http://www.docudesk.com

ಕೆಳಸೇತುವೆ ಕೆಲಸವನ್ನು ಜರೂರು ಪೂರ್ಣಗೊಳಿಸಿಕೊಡಲು ಸಂಬಂಧಪಟ್ಟ ಇಲಾಖೆಯವರನ್ನು ಕೋರುವ ವಿಚಾರ.

ತೀರ್ಮಾನ 12-ವಿಷಯದ ಬಗ್ಗೆ ಸಭೆಯು ಕೂಲಂಕುಷವಾಗಿ ಚರ್ಚಿಸಿತು. ಈ ಬಗ್ಗೆ ಸಭೆಗೆ ಹಾಜರಿದ್ದ ಲೋಕೋಪಯೋಗಿ ಇಲಾಖೆ ಉಪವಿಭಾಗ ಸಹಾಯಕ ಅಭಿಯಂತರರು ಮಾತನಾಡಿ ಸದರಿ ಕಾಮಗಾರಿಯ ಟೆಂಡರ್ ನ್ನು ಅನುಮೋದನೆಗೆ ಐಡಿಡಿ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸದ್ದು ಕಡತ ಸದರಿ ಇಲಾಖೆಯಲ್ಲಿ ಬಾಕಿ ಇರುತ್ತದೆ ಎಂದು ಟೆಂಡರ್ ಅನುಮೋದನೆ ದೊರೆತ ತಕ್ಷಣ ಕಾಮಗಾರಿ ಬಾಕಿ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು. ನಂತರ ಅಧ್ಯಕ್ಷರು ಮಾತನಾಡಿ ಸಾರ್ವಜನಿಕ ಹಿತದೃಷ್ಟಿಯಿಂದ ಶೀಘ್ರವಾಗಿ ಕೆಳಸೇತುವೆ ಬಾಕಿ ಕೆಲಸ ಪೂರ್ಣಗೊಳಿಸುವುದು ಅಗತ್ಯವಾಗಿದ್ದು, ಈ ಸಂಬಂಧವಾಗಿ ಸದಸ್ಯರುಗಳೆಲ್ಲ ಸೇರಿ ಶಾಸಕರನ್ನು ಭೇಟಿ ಮಾಡಿ ಜರೂರು ಕಡತವನ್ನು ಮಂಜೂರು ಮಾಡಿಕೊಡುವಂತೆ ಕೋರಿಕೊಳ್ಳುವುದೆಂದು ತಿಳಿಸಿದರು. ನಂತರ ಸಭೆಯ ಅಧ್ಯಕ್ಷರ ಅಭಿಪ್ರಾಯವನ್ನು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 13- ರಾಮನಗರ ಟೌನ್ ಹಳೇ ಬಿ.ಎಂ. ರಸ್ತೆಯಲ್ಲಿರುವ ಖಾತೆ ನಂ. 2707/1252 ರ ನಿವೇಶನವನ್ನು ದಿ. 28.04.1968ರ ಕೌನ್ಸಿಲ್ ನಿರ್ಣಯದಂತೆ ಮಂಜೂರು ಮಾಡಿಕೊಡಬೇಕೆಂದು ಶ್ರೀ. ಜಯರಾಂ ರೆಡ್ಡಿ ಬಿನ್ ಕೆ. ಸುಬ್ಬಯ್ಯ ರೆಡ್ಡಿ ರವರು ಕೋರಿರುವ ಅರ್ಜಿಯ ವಿಚಾರ.

ತೀರ್ಮಾನ 13- ವಿಷಯದ ಬಗ್ಗೆ ಸಭೆಯು ಚರ್ಚಿಸಿ ನಿಯಾಮಾನುಸಾರ ಹರಾಜು ಮೂಲಕ ವಿಲೇ ಪಡಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 14- ಶೇ. 18ರ ಯೋಜನೆಯಡಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಮನಗರ ಇವರಿಗೆ ಪೀಠೋಪಕರಣ ನೀಡಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 14- ಶೇ. 18ರ ಯೋಜನೆಯಡಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಮನಗರ ಇವರಿಗೆ ಪೀಠೋಪಕರಣ ನೀಡಿರುವುದನ್ನು ಅನುಸಮರ್ಥನಗೊಳಿಸಲಾಯಿತು.

ವಿಷಯ 15- ಶೇ. 18ರ ಯೋಜನೆಯಡಿಯಲ್ಲಿ ಪ.ಜಾತಿ ಮತ್ತು ಪ. ಪಂಗಡದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ವಿತರಿಸಿರುವ ಪಟ್ಟಿಯನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 15- ಶೇ. 18ರ ಯೋಜನೆಯಡಿ ಕೆಳಕಂಡ ಫಲಾನುಭವಿಗಳಿಗೆ ಕಂಪ್ಯೂಟರ್ ವಿತರಿಸಿರುವುದನ್ನು ಅನುಸಮರ್ಥನಗೊಳಿಸಲಾಯಿತು.

PDF Created with deskPDF PDF Writer - Trial :: http://www.docudesk.com

| ಕ್ರ. ಸಂ | ಫಲಾನುಭವಿಗಳ ಹೆಸರು | ವಿದ್ಯಾರ್ಹತೆ |
|---|---|---|
| 1 | ಅಶೋಕ ಎನ್ ಬಿನ್ ನಾರಾಯಣ ವಿ<br>ನಂ.313, ಕಾಯಿಸೊಪ್ಪಿನ ಬೀದಿ, ರಾಮನಗರ | B.E. (7th Semester) Electrical & Electronics Engineering, Gousia college, Ramanagagram |
| 2 | ಟಿ.ಎಸ್. ಕಿರಣ್ ಬಿನ್ ಶ್ರೀನಿವಾಸ್ ಟಿ.ವಿ<br>4ನೇ ಕ್ರಾಸ್, ಗಾಂಧಿನಗರ, ರಾಮನಗರ | B.E (8th Semester) Mechnical Engineering, Gousia college, Ramanagagram |
| 3 | ಶ್ರೀನಿವಾಸ್ ಎ ಬಿನ್ ಆಂಜನಯ್ಯ<br>ನಂ.3200-28, 3ನೇ ಕ್ರಾಸ್, ಗಾಂಧಿನಗರ, ರಾಮನಗರ | B.E. (4th Semester) Industrial Engineering & Management, JSS Academy of Technical Education, Uttarahalli, Bangalore. |
| 4 | ವೆಂಕಟೇಶ್ ಎನ್ ಬಿನ್ ನಾಗರಾಜ್<br>ನಂ.169, ಮೇದರಬೀದಿ, ರಾಮನಗರ | B.E. (2nd Semester) Mechanical Engineering Gousia college, Ramanagagram |
| 5 | ಕೆ. ಶಿವಕುಮಾರ್ ಬಿನ್ ಕೆಂಪಯ್ಯ<br>ವಿನಾಯಕನಗರ, ರಾಮನಗರ | B.E. Electrical & Electronics Engineering, DON, BOSCO Institute of Technology, Kumbalagodu, Bangalore. |

ವಿಷಯ 16- 2007-08ನೇ ಸಾಲಿನ ಶೇ. 18ರ ಬಾಬಿನಲ್ಲಿ 29 ಹೊಲಿಗೆ ಯಂತ್ರಗಳನ್ನು ಪೌರಕಾರ್ಮಿಕರ ಕುಟುಂಬಗಳಿಗೆ ನೀಡಲು ಅನುಮೋದನೆ ಪಡೆದು ಖರೀದಿಸಲಾಗಿದ್ದು, ವಿತರಿಸಲು ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರ.

ತೀರ್ಮಾನ 16- ಕೆಳಕಂಡಂತೆ ಆಯ್ಕೆ ಮಾಡಲಾಗಿರುವ ಪೌರ ಕಾರ್ಮಿಕರ ಕುಟುಂಬಕ್ಕೆ ಶೇ. 18ರ ಯೋಜನೆಯಡಿ ಖರೀದಿಸಿರುವ ಹೊಲಿಗೆ ಯಂತ್ರಗಳನ್ನು ವಿತರಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

## ಪೌರಾಕಾರ್ಮಿಕರ ಕುಟುಂಬದವರ ಹೊಲಿಗೆ ಯಂತ್ರ ಫಲಾನುಭವಿಗಳ ಪಟ್ಟಿ

| ಕ್ರ.ಸಂ. | ಪೌರಾಕಾರ್ಮಿಕರ ಹೆಸರು | ಕುಟುಂಬದವರ ಹೆಸರು |
|---|---|---|
| 1. | ಎನ್. ಸುರೇಶ್ | ಶಾಂತಮ್ಮ ಕೋಂ. ಶಂಕರ್ |
| 2. | ವಿ. ಕೃಷ್ಣ | ಚೆನ್ನಕ್ಕ ಕೋಂ. ಕೃಶ್ಣ |
| 3. | ಗೋಪಾಲ್ | ಗೀತಾ ಕೋಂ. ಗೋಪಾಲ್ |
| 4. | ಕುಮಾರ | ತುಳಸಿ ಬಿನ್. ಕುಮಾರ |
| 5. | ಕೆ. ಮುರುಗೇಶ್ | ಮಂಜುಳ ಕೋಂ. ಕೆ. ಮುರುಗೇಶ್ |
| 6. | ಸುಗುಣಮ್ಮ | ಮಂಗಳ ಬಿನ್. ಸುಗುಣಮ್ಮ |
| 7. | ಕೆ.ಎಸ್. ನಾಗರಾಜು | ವಿಜಯ ಕೋಂ. ಕೆ.ಎಸ್. ನಾಗರಾಜು |
| 8. | ತಿಮ್ಮರಾಜು | ಸರೋಜಮ್ಮ ಕೋಂ. ತಿಮ್ಮರಾಜು |
| 9. | ಮಾರಪ್ಪ | ಲಕ್ಷ್ಮಿ ಕೋಂ. ಮಾರಪ್ಪ |
| 10. | ಪಾರ್ವತಮ್ಮ | ಲಕ್ಷ್ಮಿದೇವಿ ಕೋಂ. ರಮೇಶ |
| 11. | ಕಿಟ್ಟಿ | ಕೆ. ನಾಗರತ್ನ |

PDF Created with deskPDF PDF Writer - Trial :: http://www.docudesk.com

| | | |
|---|---|---|
| 12. | ಲಕ್ಷ್ಮಿನಾರಾಯಣ | ಮಂಜುಳ ಬಿನ್. ಲಕ್ಷ್ಮಿನಾರಾಯಣ |
| 13 | ಕಣ್ಣ | ಜಾನಕಿ ಬಿನ್. ಕಣ್ಣ |
| 14 | ಕೃಷ್ಣ (ಡ್ರೈವರ್) | ಗಂಗಾ ಬಿನ್. ಕೃಷ್ಣ |
| 15 | ಜಿ. ಶ್ರೀನಿವಾಸ್ | ಗಿರಿಜಾ ಕೋಂ. ಜಿ. ಶ್ರೀನಿವಾಸ್ |
| 16 | ಲಿಂಗರಾಜು (ಮೇಸ್ತ್ರಿ) | ಭಾಗ್ಯಮ್ಮ ಬಿನ್ ಲಿಂಗರಾಜು |
| 17 | ಚೆಲುವರಾಜು | ತುಳಸಮ್ಮ ಬಿನ ಚೆಲುವರಾಜು |
| 18 | ಬಾಲರಾಜ್ | ಕೋಮಲ ಕೋಂ ಬಾಲರಾಜ್ |
| 19 | ಗಂಗಲಪ್ಪ | ರೆಡ್ಡಮ್ಮ ಬಿನ್ ಗಂಗಲಪ್ಪ |
| 20 | ಲಿಂಗರಾಜು | ಭಾರತಿ ಬಿನ್ ಲಿಂಗರಾಜು |
| 21 | ಮಂಜುನಾಥ | ಪದ್ಮ ಬಿನ್ ಮಂಜುನಾಥ |
| 22 | ನರಸಿಂಹ ಪಿ. | ಧನಲಕ್ಷ್ಮಿ ಬಿನ್ ನರಸಿಂಹ . ಪಿ |
| 23 | ಕುಳ್ಳ ನರಸಿಂಹ | ರಮಾ ಬಿನ್ನ ಕುಳ್ಳ ನರಸಿಂಹ |
| 24 | ವಿ. ವೆಂಕಟೇಶ್ | ಪದ್ಮ ಬಿನ್ ವಿ. ವೆಂಕಟೇಶ್ |
| 25 | ದೊಡ್ಡ ಹೇಮಣ್ಣ | ರಾಮಾಂಜಲು ಬಿನ್ ದೊಡ್ಡ ಹೇಮಣ್ಣ |
| 26 | ಜಿ. ತಿಮ್ಮಯ್ಯ | ಕೋಮತ ಬಿನ್ ಜಿ. ತಿಮ್ಮಯ್ಯ |
| 27 | ರಾಮಣ್ಣ | ಕೃಷ್ಣಮ್ಮ ಬಿನ್ ರಾಮಣ್ಣ |
| 28 | ನರಸಿಂಹಯ್ಯ | ಪಾರ್ವತಿ ಬಿನ್ ನರಸಿಂಹಯ್ಯ |
| 29 | ಜಿ. ಗುರುಸ್ವಾಮಿ | ಗೀತಾ ಬಿನ್ ಜಿ.ಗುರುಸ್ವಾಮಿ |

ವಿಷಯ 17- ಸ್ಥಳೀಯ ಮತ್ತು ಉಚ್ಚ ನ್ಯಾಯಾಲಯದ ಪ್ರಕರಣಗಳನ್ನು ನೋಡುತ್ತಿರುವ ನಗರಸಭೆ ವಕೀಲರುಗಳಿಗೆ ಇತ್ಯರ್ಥಗೊಂಡಿರುವ ಹಾಗೂ ವಿವಿಧ ಹಂತದಲ್ಲಿರುವ ದಾವೆಗಳಿಗೆ ವಕೀಲಿ ಫೀ ಪಾವತಿಸುವುದನ್ನು ಅನುಮೋದನೆ ನೀಡುವ ವಿಚಾರ.

ತೀರ್ಮಾನ 17- ನಗರಸಭೆ ವಿರುದ್ಧ ಹೂಡಿರುವ ದಾವೆಗಳ ಮಾಹಿತಿಯನ್ನು ಸಭೆಗೆ ವಿವರಿಸಲಾಯಿತು. ನಂತರ ಸಭೆಯು ನಗರಸಭೆ ಪರವಾಗಿ ದಾವೆಗಳನ್ನು ನಿರ್ವಹಿಸುತ್ತಿರುವ ಉಚ್ಚ ನ್ಯಾಯಾಲಯ ಮತ್ತು ಸ್ಥಳೀಯ ನ್ಯಾಯಾಲಯದ ವಕೀಲರಿಗೆ ದಾವೆಗಳ ಅನುಸಾರ ಫೀ ಪಾವತಿ ಮಾಡಿರುವುದನ್ನು ಅನುಸಮರ್ಥನಗೊಳಿಸಲಾಯಿತು. ಇನ್ನು ಮುಂದೆ ದಾವೆಗಳ ಅನುಸಾರ ವಕೀಲರಿಗೆ ಫೀ ಪಾವತಿ ಮಾಡುವ ಅಧಿಕಾರವನ್ನು ಅಧ್ಯಕ್ಷರಿಗೆ ಮತ್ತು ಪೌರಾಯುಕ್ತರಿಗೆ ಪ್ರತ್ಯೇಜಿಸುವುದೆಂದು ಸಭೆ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 18- ಸಾರ್ವಜನಿಕ ಗ್ರಂಥಾಲಯ ಇಲಾಖೆ ರಾಮನಗರ ಇವರು ಐಜೂರು ಬಡಾವಣೆಯಲ್ಲಿ ಮತ್ತು ಯಾರಬ್ ನಗರದ ನಗರಸಭೆ ಸಮುದಾಯ ಭವನಗಳಲ್ಲಿ ಗ್ರಂಥಾಲಯ ಪ್ರಾರಂಭಿಸಲು ಅವಕಾಶ ಮಾಡಿಕೊಡಲು ಕೋರಿರುವ ಮೇರೆಗೆ ಪರಿಶೀಲಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 18- ಸಮುದಾಯ ಭವನದಲ್ಲಿ ಗ್ರಂಥಾಲಯ ತೆರೆಯುವುದರಿಂದ ಅಲ್ಲಿನ ನಾಗರೀಕರಿಗೆ ಅನುಕೂಲವಾಗುವುದರಿಂದ ಗ್ರಂಥಾಲಯ ತೆರೆಯಲು ಅನುಮತಿ ನೀಡುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 19- ಸರ್ಕಾರದ ನಡವಳಿ ಸಂ. ಯುಡಿಡಿ/91/ಎಸ್.ಎಫ್.ಸಿ/2005, ದಿ. 29-12-2007 ರ ನಡವಳಿ ಮೂಲಕ 2007-08ನೇ ಸಾಲಿಗೆ 12 ನೇ ಹಣಕಾಸು ಯೋಜನೆಯಡಿ ಮೊದಲನೇ ಕಂತು ರೂ. 6.08 ಲಕ್ಷ ಮತ್ತು ಪೌರಾಡಳಿತ ನಿರ್ದೇಶನಾಲಯ ಪತ್ರದ ಸಂ. ಪೌನಿ/ಜಂನಿಹ/ಎಸ್ಎಫ್/65 2005-06 ದಿ, 06.12.2007 ರ ಪತ್ರದಂತೆ ಬಡ್ಡಿ ರೂ. 6172-00 ಬಿಡುಗಡೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸುವ ವಿಚಾರ.

ತೀರ್ಮಾನ 19- ಸರ್ಕಾರದ ನಡವಳಿಯನ್ನು ಸಭೆಗೆ ಓದಿ ತಿಳಿಸಲಾಯಿತು. 2007-08ನೇ ಸಾಲಿಗೆ 12ನೇ ಹಣಕಾಸು ಯೋಜನೆಯಡಿ ಮೊದನೇ ಕಂತು ರೂ. 6.08 ಲಕ್ಷಗಳಿಗೆ ನಗರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ತಯಾರಿಸಿರುವ ಕ್ರಿಯಾ ಯೋಜನೆಯನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು ಹಾಗೂ ಕ್ರಿಯಾ ಯೋಜನೆಯನ್ನು ಮಂಜೂರು ಮಾಡಿಕೊಡುವಂತೆ ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವುದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿತು.

| | **12ನೇ ಹಣಕಾಸು** | **6.08** |
|---|---|---|
| 1 | ವಾರ್ಡ್ ನಂ, 28 ರ ಶಿವಲಿಂಗಯ್ಯ ನವರ ತೋಟದ ಹತ್ತಿರ ಚರಂಡಿ ನಿರ್ಮಾಣ | 2.00 |
| 2 | ವಾರ್ಡ್ ನಂ, 26 ರ ಐಜೂರು | 2.00 |
| 3 | ವಾರ್ಡ್ ನಂ, 21 ರ ಇಲಿಗರ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 2.08 |
| | ಒಟ್ಟು | 6.08 |

ಪೌರಾಡಳಿತ ನಿರ್ದೇಶನಾಲಯದ ಪತ್ರದ ವಿವರಣೆಯನ್ನು ಸಭೆಗೆ ಓದಿ ತಿಳಿಸಲಾಯಿತು. ಪತ್ರದ ವಿವರಣೆಯಂತೆ ಬಂದಿರುವ ಬಡ್ಡಿ ರೂ. 6172-00 ಗಳಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೆಳಕಂಡ ಕಾಮಗಾರಿಯನ್ನು ಮಂಜೂರು ಮಾಡಲು ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವುದೆಂದು ಸಭೆಗೆ ತೀರ್ಮಾನಿಸಿತು.

| | | |
|---|---|---|
| 1 | ವಾರ್ಡ್ ನಂ, 2 ರ ಅಂಬೇಡ್ಕರ್ ನಗರದಲ್ಲಿ ಡಕ ಸ್ಲಾಬ್ ನಿರ್ಮಾಣ | 6,172-00 |

ವಿಷಯ 20- ಸರ್ಕಾರದ ನಡವಳಿ ಸಂ. ನಅಇ-69-ಎಸ್.ಎಫ್. ಸಿ-2007, ದಿ. 16.01.2008ರ ಮೂಲಕ ಈ ನಗರಸಭೆಗೆ ರಸ್ತೆ ಮತ್ತು ಸೇತುವೆ ನಿರ್ವಹಣೆಗಾಗಿ ರೂ. 25.00 ಲಕ್ಷ ಅನುದಾನ ಮಂಜೂರು ಮಾಡಿದ್ದು ಈಗಾಗಲೇ ಕ್ರಿಯಾ ಯೋಜನೆ ಸಲ್ಲಿಸಿರುವುದನ್ನು ಅನುಮೋದಿಸುವ ವಿಚಾರ.

ತೀರ್ಮಾನ 20- ಸರ್ಕಾರದ ನಡವಳಿ ಪತ್ರದ ವಿವರಣೆಯನ್ನು ಸಭೆಯಲ್ಲಿ ಮಂಡಿಸಲಾಯಿತು. ಈಗಾಗಲೇ 12ನೇ ಹಣಕಾಸು ಯೋಜನೆಯಡಿಯಲ್ಲಿ ಮಂಜೂರಾತಿಯಾಗಿರುವ ಕ್ರಿಯಾ ಯೋಜನೆ ಸರ್ಕಾರದಿಂದ

PDF Created with deskPDF PDF Writer - Trial :: http://www.docudesk.com

ಅನುಮೋದನೆಯಾಗಿರುವುದರಿಂದ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಪತ್ರದ ಸಂಖ್ಯೆ ರಾಜಿಕ/ಎಂಯುಎನ್(2)/ಸಿಆರ್/2007-08, ದಿ.02.06.2008 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುವುದರಿಂದ ನಿಯಾಮಾನುಸಾರ ಪಾರದರ್ಶಕ ನಿಯಮದಂತೆ ಟೆಂಡರ್ ಕರೆದು ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು.

ವಿಷಯ 21- ರಾಮನಗರ ನಗರಸಭಾ ವ್ಯಾಪ್ತಿ 2007-08 ರಲ್ಲಿ ಬೀದಿ ದೀಪ ನಿರ್ವಹಣೆ ಗುತ್ತಿಗೆಯನ್ನು ಶ್ರೀ ಮಂಜುನಾಥ ಎಂಟರ್ ಪ್ರೈಸಸ್ ಇವರಿಗೆ ನೀಡಿದ್ದು, ದಿ. 31.03.2008 ಕ್ಕೆ ಟೆಂಡರ್ ಅವಧಿ ಮುಗಿಯುವ ಕಾರಣ ಹೊಸದಾಗಿ ಟೆಂಡರ್ ಪ್ರಕ್ರಿಯೆ ಮುಗಿಸಿ ಮುಂದೆ ಬೀದಿ ದೀಪ ನಿರ್ವಹಣೆ ಗುತ್ತಿಗೆ ಆದೇಶ ನೀಡುವವರೆಗೆ ಸದರಿಯವರನ್ನೇ ಮುಂದುವರೆಸಲು ಅನುಮೋದನೆ ನೀಡುವ ವಿಚಾರ.

ತೀರ್ಮಾನ 21- ವಿಷಯವನ್ನು ಪರಿಶೀಲಿಸಲಾಯಿತು. ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆಯನ್ನು ದಿ. 31.03.2008 ರಿಂದ ಮುಂದುವರೆಸಿರುವುದಕ್ಕೆ ಅನುಸಮರ್ಥನೆ ನೀಡುತ್ತಾ. 2008-09ನೇ ಸಾಲಿನ ಬೀದಿದೀಪಗಳ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕಾರ್ಯಾದೇಶ ನೀಡುವವರೆಗೆ ಹಾಲಿ ಇರುವ ಗುತ್ತಿಗೆದಾರರನ್ನು ಅನುಮೋದಿತ ದರಗಳಂತೆ ಮುಂದುವರೆಸಬಹುದೆಂದು ಸಭೆ ತೀರ್ಮಾನ ಕೈಗೊಂಡಿತು.

ವಿಷಯ 22- ರಾಮನಗರ ನಗರಸಭೆ ವ್ಯಾಪ್ತಿಯ ಮಿನಿ ಹೈಮಾಸ್ಟ್ ಸ್ಥಾಪನೆ ಮಾಡಲು (ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ) ದಿ. 20.03.2008 ರಂದು ಕರೆದಿದ್ದ ಅಲ್ಪಾವಧಿ ಟೆಂಡರ್ ಗೆ ಪೂರಕವಾಗಿ ಬಂದಿರುವ ಟೆಂಡರ್ ಗಳನ್ನು ಪರಿಶೀಲಿಸಿ ಅನುಮೋದನೆ ನೀಡುವ ವಿಚಾರ.

ತೀರ್ಮಾನ 22- ವಿಷಯವನ್ನು ಪರಿಶೀಲಿಸಲಾಯಿತು. ಸರ್ಕಾರದ ಆದೇಶ ಸಂಖ್ಯೆ ನಅಇ-47-ಎಸ್.ಎಫ್. ಸಿ-2007, ದಿ. 02.08.2007 ರಂತೆ ಬಿಡುಗಡೆಯಾಗಿರುವ ರೂ. 5.00 ಕೋಟಿಗಳ ವಿಶೇಷ ಅನುದಾನದಲ್ಲಿ ನಗರದ ಈ ಕೆಳಕಂಡ ಸ್ಥಳಗಳಲ್ಲಿ ಮಿನಿ ಹೈಮಾಸ್ಟ್ ಸ್ಥಾಪನೆ ಮಾಡಲು ದಿ. 20.03.2008 ರಂದು ಕರೆದಿದ್ದ ಅಲ್ಪಾವಧಿ ಟೆಂಡರ್ ಗೆ ಪೂರಕವಾಗಿ ಈ ಕೆಳಕಂಡಂತೆ ಟೆಂಡರ್ ದಾರರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಗುತ್ತಿಗೆದಾರರ ವಿವರ | ರಾಯರದೊಡ್ಡಿ (ಟೆಂಡರ್ ಗಿಟ್ಟಿರುವ ಮೊತ್ತ ರೂ. 209090-00) | ವಾರ್ಡ್ ನಂ. 26ರ ದರ್ಗಾ ಹತ್ತಿರ (ಟೆಂಡರ್ ಗಿಟ್ಟಿರುವ ಮೊತ್ತ ರೂ. 209880-00) | ವಾರ್ಡ್ ನಂ. 30 ರ ತಿಲಕ್ ಪಾರ್ಕ್ ಹತ್ತಿರ (ಟೆಂಡರ್ ಗಿಟ್ಟಿರುವ ಮೊತ್ತ ರೂ. 214920-00) |
|---|---|---|---|---|
| 1 | ಪ್ರಭಾ ಎಲೆಕ್ಟ್ರಿಕಲ್ಸ್ | 142975-00 (ಶೇ 31.6 ಕಡಿಮೆ) | 143495-00 (ಶೇ 31.6 ಕಡಿಮೆ) | 145220 (ಶೇ 32.4 ಕಡಿಮೆ) |
| 2 | ಕರ್ನಾಟಕ ಎಲೆಕ್ಟ್ರಿಕಲ್ಸ್ | 156735-00 (ಶೇ 25 ಕಡಿಮೆ) | 156810-00 (ಶೇ 25.28 ಕಡಿಮೆ) | 160150-00 (ಶೇ 25.3 ಕಡಿಮೆ) |

PDF Created with deskPDF PDF Writer - Trial :: http://www.docudesk.com

| | | | | |
|---|---|---|---|---|
| 3 | ಗಾಯಿತ್ರಿ ಎಲೆಕ್ಟ್ರಿಕಲ್ಸ್ | 166085-00 (ಶೇ 20.5 ಕಡಿಮೆ) | 165907-00 (ಶೇ 20.95 ಕಡಿಮೆ) | 168505-00 (ಶೇ 21.5 ಕಡಿಮೆ) |
| 4 | ಸಪ್ತಗಿರಿ ಎಂಟರ್ ಪ್ರೈಸಸ್ | 168523-00 (ಶೇ 19.4 ಕಡಿಮೆ) | 168561-00 (ಶೇ 19.6 ಕಡಿಮೆ) | 173030-00 (ಶೇ 19.4 ಕಡಿಮೆ) |
| 5 | ರಕ್ಷಕ್ ಎಲೆಕ್ಟ್ರಿಕಲ್ಸ್ | 169412-00 (ಶೇ 18.9 ಕಡಿಮೆ) | 172664-00 (ಶೇ 17.7 ಕಡಿಮೆ) | 172240-00 (ಶೇ 19.85 ಕಡಿಮೆ) |
| 6 | ಶಿವನಯನ ಎಲೆಕ್ಟ್ರಿಕಲ್ಸ್ | 173861-00 (ಶೇ 16.8 ಕಡಿಮೆ) | 173931-00 (ಶೇ 17.12 ಕಡಿಮೆ) | 177251-00 (ಶೇ 17.5 ಕಡಿಮೆ) |
| 7 | ಕೃಷ್ಣ ಎಂಟರ್ ಪ್ರೈಸಸ್ | 205472 (ಶೇ 1.7 ಕಡಿಮೆ) | 205515 (ಶೇ 2.07 ಕಡಿಮೆ) | 208469-00 (ಶೇ 3.00 ಕಡಿಮೆ) |

ಮೇಲ್ಕಂಡ ಹೋಲಿಕೆ ತಃಖ್ತೆಯಂತೆ ಮೆ. ಪ್ರಭಾ ಎಲೆಕ್ಟ್ರಿಕಲ್ಸ್, ಬೆಂಗಳೂರು ಉಳಿದ ಗುತ್ತಿಗೆದಾರರಗಿಂತ ಕಡಿಮೆ ದರ ಪ್ರಸ್ತಾವನೆ ಸಲ್ಲಿಸಿದ್ದು, ಸದರಿಯವರ ಪ್ರಸ್ತಾವನೆಗೆ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು. ಹಾಗೂ ಟೆಂಡರ್ ಅನುಮೋದನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಸಭೆಯು ತೀರ್ಮಾನಿಸಿತು.

ವಿಷಯ 23- ರಾಮನಗರ ನಗರಸಭಾ ವ್ಯಾಪ್ತಿಯಲ್ಲಿ ಬೀದಿ ದೀಪಗಳ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ದಿ. 01.03.2008 ರಂದು ಕರೆದಿದ್ದ ಟೆಂಡರ್ ಗೆ ಪೂರಕವಾಗಿ ಬಂದಿಸುವ ಟೆಂಡರ್ ಗಳನ್ನು ಪರಿಶೀಲಿಸಿ ಅನುಮೋದನೆ ನೀಡುವ ವಿಚಾರ.

ತೀರ್ಮಾನ 23- ವಿಷಯವನ್ನು ಕಿರಿಯ ಅಭಿಯಂತರರು (ವಿದ್ಯುತ್) ರವರು ಸಭೆಗೆ ವಿವರಿಸಿದರು. ದಿ. 01.03.2008 ರಂದು ಬೀದಿ ದೀಪಗಳ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಕರೆದಿದ್ದ ಟೆಂಡರ್ ಪ್ರಕಟಣೆಗೆ ಪೂರಕವಾಗಿ ಒಟ್ಟು 25 ಜನ ಗುತ್ತಿಗೆದಾರರು ಟೆಂಡರ್ ನಮೂನೆಗಾಗಿ ಮನವಿ ಸಲ್ಲಿಸಿದ್ದರು. ಅವರಲ್ಲಿ ಟೆಂಡರ್ ನಿಗದಿತ ದಿನಾಂಕ ಮತ್ತು ಅವಧಿಯೊಳಗೆ ಒಟ್ಟು 5 ಜನ ಟೆಂಡರ್ ಪ್ರಸ್ತಾವನೆ ಸಲ್ಲಿಸಿದ್ದು, ಇವರಲ್ಲಿ ಕೆಳಕಂಡ 3 ಜನ ಗುತ್ತಿಗೆದಾರರು ಮಾತ್ರ ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಮೇರೆಗೆ ದಿ. 05.04.2008 ರಂದು ಸದರಿ ಗುತ್ತಿಗೆದಾರರ ಹಣಕಾಸಿನ ಪ್ರಸ್ತಾವನೆ ತೆರೆಯಲಾಯಿತು. ಗುತ್ತಿಗೆದಾರರು ಈ ಕೆಳಕಂಡಂತೆ ದರ ನಮೂದಿಸಿರುತ್ತಾರೆ.

| ಕ್ರ.ಸಂ | ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ಮೊತ್ತ | | ಷರಾ |
|---|---|---|---|---|
| | | ಮಾಸಿಕ | ವಾರ್ಷಿಕ | ಅಂದಾಜು ಮೊತ್ತ |
| 1 | ಮೆ. ಗಂಗಾ ಎಂಟರ್ ಪ್ರೈಸಸ್, ಬೆಂಗಳೂರು | 137159-00 | 1645908-00 | ಶೇ. 27 ಕಡಿಮೆ |
| 2 | ಶ್ರೀ ಮಂಜುನಾಥ ಎಂಟರ್ ಪ್ರೈಸಸ್ | 217206-00 | 2606474-00 | ಶೇ. 14.97 ಹೆಚ್ಚು |
| 3 | ಪ್ರಭಾ ಎಲೆಕ್ಟ್ರಿಕಲ್ಸ್, ಬೆಂಗಳೂರು | [illegible] | [illegible] | [illegible] ಹೆಚ್ಚು |

PDF Created with deskPDF PDF Writer - Trial :: http://www.docudesk.com

ನಂತರ ದಿ. 05.04.2008 ರಂದು ಕಡಿಮೆ ದರ ನಮೂದಿಸಿರುವ ಮೆ. ಗಂಗಾ ಎಂಟರ್ ಪ್ರೈಸಸ್ ಇವರು ಲಿಖಿತವಾಗಿ ಮನವಿ ಸಲ್ಲಿಸಿ ತಾವು ನಮೂದಿಸಿರುವ ದರಕ್ಕೆ ಕಾರ್ಯನಿರ್ವಹಣೆ ಸಾಧ್ಯವಾಗುವುದಿಲ್ಲವಾದ್ದರಿಂದ ತಮ್ಮ ಟೆಂಡರ್ ಪ್ರಸ್ತಾವನೆಯನ್ನು ಹಿಂಪಡೆಯುತ್ತಿರುವುದಾಗಿ ಸೂಚಿಸಿರುತ್ತಾರೆ ಎಂದು ಕಿರಿಯ ಅಭಿಯಂತರರು ಸಭೆಗೆ ವಿವರಿಸಿದರು. ಸಭೆಯು ಈ ಬಗ್ಗೆ ಪರಿಶೀಲನೆ ನಡೆಸಿ ಚರ್ಚಿಸಿದ ನಂತರ ಮೆ. ಗಂಗಾ ಎಂಟರ್ ಪ್ರೈಸಸ್, ಬೆಂಗಳೂರು ಇವರು ಟೆಂಡರ್ ಪ್ರಕ್ರಿಯೆಯನ್ನು ಜಟಿಲಗೊಳಿಸಿದ್ದಕ್ಕಾಗಿ ಅವರ ಇಎಂಡಿ ಮೊತ್ತ ರೂ. 57,000-00 ಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಸೂಚಿಸಿ ಕಡಿಮೆ ದರ ಪ್ರಸ್ತಾವನೆಯನ್ನು ಸಲ್ಲಿಸಿರುವವರಲ್ಲಿ 2ನೇ ಗುತ್ತಿಗೆದಾರರಾದ ಮೆ. ಮಂಜುನಾಥ ಎಂಟರ್ ಪ್ರೈಸಸ್ ರವರು ಸಲ್ಲಿಸಿರುವ ಅಂದಾಜು ಮೊತ್ತಕ್ಕಿಂತ ಶೇ. 14.97 ರ ಹೆಚ್ಚಿನ ಪ್ರಸ್ತಾವನೆಗೆ ಬದಲಾಗಿ ಅಂದಾಜು ಪಟ್ಟಿ ಮೊತ್ತಕ್ಕಿಂತ ಶೇ. 5 ಹೆಚ್ಚು ದರಗಳನ್ನು ಅನುಮೋದಿಸಿ ಜಿಲ್ಲಾಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿತು.

ವಿಷಯ 24- ರಾಮನಗರ ನಗರಸಭೆ ವ್ಯಾಪ್ತಿಯಲ್ಲಿ ಹೊಸದಾಗಿ ಬೀದಿ ದೀಪ ಅಳವಡಿಸಲು ವಿದ್ಯುತ್ ಮಾರ್ಗ ಸ್ಥಾಪನೆ ಮಾಡಲು ಮತ್ತು ರಸ್ತೆಗೆ ಅಡ್ಡಲಾಗಿರುವ ಕಂಬಗಳನ್ನು ಸ್ಥಳಾಂತರಿಸಲು ಮಾನ್ಯ ಸದಸ್ಯರುಗಳಿಂದ ಹಾಗೂ ಸಾರ್ವಜನಿಕರಿಂದ ಅರ್ಜಿಗಳು ಬಂದಿದ್ದು, ಅಂದಾಜು ಪತ್ರ ತಯಾರಿಸಲು ಬೆಸ್ಕಾಂ ರಾಮನಗರ ಇವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿಯವರಿಂದ ಅಂದಾಜು ಪಟ್ಟಿ ಬಂದ ನಂತರ ಅಂದಾಜನ್ನು ಬೆಸ್ಕಾಂಗೆ ಠೇವಣಿ ಮಾಡಿ ಕ್ರಮ ವಹಿಸಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 24- ವಿಷಯವನ್ನು ಪರಿಶೀಲಿಸಲಾಯಿತು. ಸದರಿ ಕಾರ್ಯಕ್ಕೆ ಬೆಸ್ಕಾಂ ರವರಿಂದ ಅಂದಾಜು ಪಟ್ಟಿ ಪಡೆದ ನಂತರ ಠೇವಣಿ ಮಾಡಿ, ಬೆಸ್ಕಾಂ ರವರೊಂದಿಗೆ ಠೇವಣಿ ವಂತಿಕೆ ( ಡಿಪಾಸಿಟ್ ಕಾಂಟ್ರಿಬ್ಯೂಶನ್) ಆಧಾರದ ಮೇರೆಗೆ ಕೆಲಸ ಕೈಗೊಳ್ಳಬಹುದೆಂದು ಸಭೆಯು ತೀರ್ಮಾನ ಕೈಗೊಳ್ಳಲಾಯಿತು.

ವಿಷಯ 25- ರಾಮನಗರ ನಗರಸಭಾ ವ್ಯಾಪ್ತಿಯ ವಾರ್ಡ್ ನಂ. 2 ರ ಜಯಮ್ಮರವರ ಮನೆಯ ಮುಂದೆ ರಸ್ತೆಗೆ ಅಡ್ಡಲಾಗಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಬೆಸ್ಕಾಂ ರಾಮನಗರ ಉಪವಿಭಾಗ ಇವರಿಗೆ ರೂ. 3905-00 ಗಳನ್ನು ಪಾವತಿ ಮಾಡಿ ಕ್ರಮ ಕೈಗೊಂಡಿರುವುದನ್ನು ಅನುಸಮರ್ಥನ ಗೊಳಿಸಿಕೊಳ್ಳುವ ವಿಚಾರ.

ತೀರ್ಮಾನ 25- ವಿಷಯವನ್ನು ಪರಿಶೀಲಿಸಲಾಯಿತು. ಸಾರ್ವಜನಿಕ ಹಿತದೃಷ್ಟಿಯಿಂದ ಕ್ರಮಕೈಗೊಂಡ ರಸ್ತೆಗೆ ಅಡ್ಡಲಾಗಿರುವ ಕಂಬ ಸ್ಥಳಾಂತರಿಸಲು ಬೆಸ್ಕಾಂ ರಾಮನಗರ ಉಪವಿಭಾಗ ಇವರಿಗೆ ರೂ. 3905-00 ಗಳನ್ನು ಪಾವತಿ ಮಾಡಿರುವುದನ್ನು ಅನುಸಮರ್ಥನಗೊಳಿಸಿತು.

ವಿಷಯ 26- ಅಂಬೇಡ್ಕರ್ ಭವನದ 100 ಕ್ಕೆ ವಿ.ಎ ವಿದ್ಯುತ್ ಪರಿವರ್ತಿತ ವಿಫಲವಾಗಿದ್ದು, ಸಭೆ ನಿರೀಕ್ಷಣೆ ಮೇರೆಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲಾಗಿದ್ದು, ಅನುಸಮರ್ಥನಗೊಳಿಸುವ ವಿಚಾರ ಮತ್ತು ವಿದ್ಯುತ್ ಪರಿವರ್ತಕ ದುರಸ್ಥಿ ಮಾಡಿಸಲು ಅನುಮೋದನೆ ನೀಡುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 26- ವಿಷಯವನ್ನು ಪರಿಶೀಲಿಸಲಾಯಿತು. ಬೆಸ್ಕಾಂ ರಾಮನಗರ ಇವರಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲು ಠೇವಣಿ ಮಾಡಿ ಕ್ರಮಕೈಗೊಂಡಿರುವುದಕ್ಕೆ ಅನುಸಮರ್ಥನೆ ನೀಡುತ್ತಾ ವಿದ್ಯುತ್ ಪರಿವರ್ತಕ (ಟ್ರಾನ್ಸ್ ಫಾರ್ಮಾರ್) ವನ್ನು ತುರ್ತಾಗಿ ದುರಸ್ತಿ ಮಾಡಿಸಲು ಅನುಮೋದನೆ ನೀಡಿತು.

ವಿಷಯ 27- ಸಾರ್ವಜನಿಕರಿಂದ ಆಸ್ತಿ ತೆರಿಗೆ ಜಮಾ ಪಡೆಯುವ ಹಾಗೂ ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮ ಪಡಿಸುವ ದೃಷ್ಟಿಯಿಂದ 2002-03ನೇ ಸಾಲಿನಿಂದ 2007-08ನೇ ಸಾಲಿನವರೆಗೆ ಮತ್ತು 2008 ರ ಏಪ್ರಿಲ್ 5 ರವರೆಗೆ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಗೆ ಬಡ್ಡಿ ಮತ್ತು ದಂಡ ಮನ್ನಾ ಮಾಡಿ ಆಸ್ತಿ ತೆರಿಗೆ ಪಾವತಿಸಲು ಆಸ್ತಿ ಮಾಲೀಕರಿಗೆ ಉತ್ತೇಜನ ನೀಡಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 27- ವಿಷಯದ ಬಗ್ಗೆ ಸಭೆಯು ಚರ್ಚಿಸಿತು. ಈ ಅವಕಾಶದಿಂದ ಮಾರ್ಚ್ 2008 ರಲ್ಲಿ ಸುಮಾರು ರೂ. 40.00 ಲಕ್ಷ ಎಸ್ಎಎಸ್ ಮೂಲಕ ತೆರಿಗೆ ಸಂದಾಯವಾಗಿದ್ದು, ಅಧ್ಯಕ್ಷರು ತೆಗೆದುಕೊಂಡಿರುವ ಕ್ರಮವನ್ನು ಶ್ಲಾಘಿಸಿ ಸರ್ವಾನುಮತದಿಂದ ಒಪ್ಪಿ ಅನುಸಮರ್ಥನಗೊಳಿಸಿತು.

ವಿಷಯ 28- ಘನ ಸರ್ಕಾರವು ರಾಮನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ್ದು, ರಾಮನಗರದಿಂದ ಸುಮಾರು ಪ್ರಯಾಣಿಕರು ರೈಲು ಪ್ರಯಾಣವನ್ನೇ ಅವಲಂಬಿಸಿದ್ದು, ಕೆಲವು ರೈಲುಗಳು ರಾಮನಗರದಲ್ಲಿ ನಿಲ್ಲದೇ ಇರುವ ರೈಲುಗಳನ್ನು ರಾಮನಗರದಲ್ಲಿ ಎಲ್ಲಾ ರೈಲುಗಳನ್ನು ನಿಲ್ಲಿಸಲು ಸಂಬಂಧಿಸಿದ ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೋರಿಕೊಳ್ಳುವ ವಿಚಾರ.

ತೀರ್ಮಾನ 28- ರಾಮನಗರವು ಜಿಲ್ಲಾ ಕೇಂದ್ರವಾಗಿದ್ದು, ಪ್ರತಿದಿನ ಸುಮಾರು 2000 ಪ್ರಯಾಣಿಕರು ರೈಲನ್ನು ಅವಲಂಬಿಸಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ರಾಮನಗರದಲ್ಲಿ ನಿಲುಗಡೆಯಾಗದ ಟಿಪ್ಪು ಎಕ್ಸಪ್ರೆಸ್, ತಂಜಾವೂರು ಎಕ್ಸಪ್ರೆಸ್, ಯಶವಂತಪುರ ಮಂಗಳೂರು ಎಕ್ಸಪ್ರೆಸ್ ಗಳನ್ನು ನಿಲ್ಲಿಸುವಂತೆ ರೈಲ್ವೆ ಇಲಾಖೆಯ ಮುಖ್ಯಸ್ಥರ ಗಮನಕ್ಕೆ ತಂದು ಕ್ರಮ ಕೈಗೊಳ್ಳುವಂತೆ ಸ್ಥಳೀಯ ಶಾಸಕರು ಮತ್ತು ಲೋಕಾಸಭಾ ಸದಸ್ಯರಾದ ತೇಜಸ್ವಿನಿ ಗೌಡ ರವರನ್ನು ಕೋರಿಕೊಳ್ಳುವುದೆಂದು ಹಾಗೂ ಈ ಕಛೇರಿಯಿಂದಲೂ ಪತ್ರ ಬರೆಯಲು ಕ್ರಮ ಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 29- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ರವರು 2005-06 ನೇ ಸಾಲಿನಲ್ಲಿ ಆಶ್ರಯ ಯೋಜಯೆಯಡಿ 370 ಮನೆಗಳ ಗುರಿ ನಿಗಧಿಪಡಿಸಿದ್ದು, ಈಗಾಗಲೇ 151 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ತದನಂತರ ಬಂದಿರುವ ಅರ್ಜಿಗಳಲ್ಲಿ ಉಳಿಕೆ 219 ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರ.

ತೀರ್ಮಾನ 29- ವಿಷಯದಲ್ಲಿ ವಿವರಿಸಿರುವಂತೆ 151 ಫಲಾನುಭವಿಗಳ ಆಯ್ಕೆ ನಂತರ ಬಂದಿರುವ ಕ್ರಮಬದ್ಧವಾದ 37 ಅರ್ಜಿಗಳನ್ನು ಜಿಲ್ಲಾಧಿಕಾರಿಗಳರವರಿಗೆ ಸಲ್ಲಿಸಿರುವುದನ್ನು ಸಭೆಯು ಅನುಸಮರ್ಥನಗೊಳಿಸಿತು. ಪ್ರಸ್ತುತ 35 ಅರ್ಜಿಗಳಲ್ಲಿ 19 ಕ್ರಮಬದ್ಧವಾಗಿದ್ದು, ಈ ಅರ್ಜಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ

PDF Created with deskPDF PDF Writer - Trial :: http://www.docudesk.com

ಮುಖಾಂತರ ನಿಗಮದ ಅನುಮೋದನೆಗೆ ಸಲ್ಲಿಸುವುದೆಂದು ಒಪ್ಪಿ ಒಟ್ಟು 56 ಅರ್ಜಿಗಳನ್ನು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಆಯ್ಕೆಯಾಗಿರುವ ಫಲಾನುಭವಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

## ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಫಲಾನುಭವಿಗಳ ಪಟ್ಟಿ

| ಕ್ರ. ಸಂ | ಅರ್ಜಿದಾರರ ಹೆಸರು ಮತ್ತು ಗಂಡನ ಹೆಸರು | ವಿಳಾಸ | ಖಾತಾ ನಂ |
|---|---|---|---|
| 1 | ಮಹದೇವಮ್ಮ ಕೋಂ ಗುರನಂಜ ಶೆಟ್ಟಿ | ಬಾಲಗೇರಿ | 857/139 |
| 2 | ಉಮಾ ಕೋಂ ರಾಜಣ್ಣ | ಇಂದಿರಾನಗರ | 815 |
| 3 | ಅಮ್ಮಣಮ್ಮ ಕೋ ವೆಂಕಟೇಶ್ | ಐಜೂರು | 316/2473/2531/75 |
| 4 | ಜಯಮ್ಮ ಕೋಂ ನರಸಿಂಹಯ್ಯ | ನಾಗನಕಟ್ಟೆ, ಐಜೂರು | 1013 |
| 5 | ರಾಮಕೃಷ್ಣ ಬಿನ್ ಚಿಕ್ಕಯ್ಯ | ಕೊಂಕಾಣಿದೊಡ್ಡಿ | 12A/382A |
| 6 | ಸಾವಾರ್ ಜಾನ್ ಬಿನ್ ಖಲೀಲ್ ಅಹಮ್ಮದ್ | ಬಾಲಗೇರಿ | 47/30/35 |
| 7 | ರತ್ನಮ್ಮ ಕೋಂ ಪುಟ್ಟಸ್ವಾಮಿ | ನೇರಳೇಕೇರಿ | 36/3024/36ಬB |
| 8 | ರಾಜಮ್ಮ ಕೋಂ ಪುಟ್ಟರಾಜು | ಬಾಲಗೇರಿ | 1022/775/60 |
| 9 | ಪ್ರೇಮಲತಾ ಕೋಂ ಕೆ. ರಮೇಶ್ | ಬಾಲಗೇರಿ | 959/241 |
| 10 | ಮುಬೀನ್ ತಾಜ್ ಕೋಂ ಪ್ಯಾರೇಜಾನ್ | ಆದಿಶಕ್ತಿಪುರ | 1068 |
| 11 | ಜಯಮ್ಮ ಕೋಂ ಶಂಕರ್ | ಐಜೂರು | 912/2364 |
| 12 | ಎಸ್. ಲಕ್ಷ್ಮಿ ಕೋಂ ಶಿವಮಾದಯ್ಯ | ಜೀಗೇನಹಳ್ಳಿ | 102/563/30/A |
| 13 | ಶಾರದಮ್ಮ ಕೋಂ ಬಲರಾಮ್ | ಮಾರುತಿನಗರ | 114/2291/114 |
| 14 | ಗಾಯಿತ್ರಿ ಕೋಂ ಕೋಟಯ್ಯ | ಹಾಜೀನಗರ | 916/889 |
| 15 | ಮಹಮ್ಮದ್ ಹುಸೇನ್ ಬಿನ್ ಅಬ್ದುಲ್ ಖಾದರ್ | ಮೆಹಬೂಬ್ ನಗರ | 13/13/1262 |
| 16 | ನಸೀಬಾತಾಜ್ ಕೋಂ ಮಹಮ್ಮದ್ ಹನೀಫ್ ಪಾಶ | ಕೊತ್ತಿಪುರ | 515/236/136/A |
| 17 | ರಜಿಯಾಬಾನು ಕೋಂ ಮುನಾವರ್ ಹುಸೇನ್ | ಕೊತ್ತಿಪುರ | 862/69/4 |
| 18 | ಜರೀನ್ ತಾಜ್ ಕೋಂ ಸೈಯದ್ ಇಬ್ರಾಹಿಂ | ಬಾಲಗೇರಿ | 767/49 |
| 19 | ನಗೀನಾ ತಾಜ್ ಕೋಂ ರೆಹಮತ್ ಉಲ್ಲಾ ಸಾಹೇಬ್ | ರೆಹಮಾನಿಯಾನಗರ | 338/83/144/49 |
| 20 | ಮೈಮುನ್ನೀಸಾ ತಾಜ್ ಕೋಂ ಅಬ್ದುಲ್ ಸುಬಾನ್ | ಕೊತ್ತಿಪುರ | 847/22/1 |
| 21 | ರೆಹಮತ್ ಬೀ ಕೋಂ ಇಬ್ರಾಹಿಂ ಖಾನ್ | ಮೆಹಬೂಬ್ ನಗರ | 521/1327 |
| 22 | ಸಿರಾಜ್ ಉನ್ನೀಸಾ ಕೋಂ ನಿಸ್ಸಾರ್ | ರೆಹಮಾನಿಯಾನಗರ | 329/74/135/40 |
| 23 | ಮುಬೀನ್ ತಾಜ್ ಕೋಂ ಮೆಹಬೂಬ್ ಪಾಶ | ಕೊತ್ತಿಪುರ | 340/85/146/51 |
| 24 | ಸಾಹೀರಾ ಬಾನು ಕೋಂ ಮುನ್ನಾ ಖಾನ್ | ಕೊತ್ತಿಪುರ | 386/19 |
| 25 | ಗೌಸ್ ಬೀ ಕೋಂ ಮಹಮ್ಮದ್ ಖಾಸಿಂ | ಯಾರಬ್ ನಗರ, 2ನೇ ಬ್ಲಾಕ್ | 576/11/2 |
| 26 | ಫರ್ಕುಂದಾ ಬಾನು ಕೋಂ ಅಬ್ದುಲ್ ಗಫೂರ್ ಸಾಬ್ | ಕೊತ್ತಿಪುರ | 377/8013 |
| 27 | ಶಕೀಲಾ ಕೋಂ ಅಫ್ಜಲ್ ಪಾಶ | ಕೊತ್ತಿಪುರ | 473B/473/22/27/A |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 28 | ಷಂಶುನ್ನೀಸಾ ಕೋಂ ಮುಕ್ತಾರ್ ಖಾನ್ | ಕೊತ್ತಿಪುರ | 165/70/3 |
| 29 | ಗೌರಮ್ಮ ಕೋಂ ರಾಜಣ್ಣ | ಕೊತ್ತಿಪುರ | 266/1125/244 |
| 30 | ಫರೀದಾ ಬಾನು ಕೋಂ ಅಯೂಬ್ ಖಾನ್ | ಕೊತ್ತಿಪುರ | 541B/227/11/2B |
| 31 | ಫರ್ವೀನ್ ತಾಜ್ ಕೋಂ ನೂರ್ ಪಾಷ | ಕೊತ್ತಿಪುರ | 505/1120/6/2 |
| 32 | ಜರೀನ್ ತಾಜ್ ಕೋಂ ಮಹಮ್ಮದ್ ಸಾಬ್ | ಕೊತ್ತಿಪುರ | 528/216/22/A |
| 33 | ಗುಲ್ಶೀರ್ ಬಾನು ಕೋಂ ಲೇ ಮೊಹಿದ್ದೀನ್ ಸಾಬ್ | ಕೊತ್ತಿಪುರ | 339/B/214/914/46/1B |
| 34 | ಜಯಮ್ಮ ಕೋಂ ಚಿಕ್ಕವೆಂಕಟಯ್ಯ | ಐಜೂರು | 605/1769/1360/46 |
| | ಜಯಮ್ಮ ಕೋಂ ರುದ್ರಪ್ಪ | ವಡೇರಹಳ್ಳಿ | 139/2934/382 |
| 36 | ಶಿವಮ್ಮ ಕೋಂ ಕೃಷ್ಣಪ್ಪ | ವಿದ್ಯಾನಗರ | 346/2374/2149 |
| 37 | ಜಯಮ್ಮ ಕೋಂ ವೆಂಕಟಪ್ಪ | ಗಾಂಧಿನಗರ | 131/119 |

## ದಿ. 11.06.2008 ರಂದು ಕೌನ್ಸಿಲ್ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದ ಫಲಾನುಭವಿಗಳ ವಿವರ.

| ಕ್ರ. ಸಂ | ಅರ್ಜಿದಾರರ ಹೆಸರು ಮತ್ತು ಗಂಡನ ಹೆಸರು | ವಿಳಾಸ | ಖಾತಾ ನಂ |
|---|---|---|---|
| 1 | ಚಿಕ್ಕತಾಯಮ್ಮ ಕೋಂ ದೇವರಾಜಯ್ಯ | ಅಂಚಿಕೆಂಪಯ್ಯನದೊಡ್ಡಿ | 3/3/266 |
| 2 | ವಿ. ಪದ್ಮಜ ಬಿನ್ ಲೇ ವೆಂಕಟಾಶೆಟ್ಟಿ | ವಡೇರಹಳ್ಳಿ | 94/592/30 |
| 3 | ಸರೋಜಮ್ಮ ಕೋಂ ಟಿ. ಗೋವಿಂದರಾಜು | ವಡೇರಹಳ್ಳಿ | 147/2324/147 |
| 4 | ರತ್ನಮ್ಮ ಕೋಂ ತಿರುಮಳೇಶ | ಬಾಲಗೇರಿ | 963/719/1 |
| 5 | ಜಯಮ್ಮ ಕೋಂ ಬೋರಯ್ಯ | ವಿಜಯನಗರ | 437/2611/195 |
| 6 | ಈರಮ್ಮ ಕೋಂ ಕಾಳಭೈರಯ್ಯ | ಐಜೂರು | 697A/2821A |
| 7 | ಗಾಯಿತ್ರಮ್ಮ ಕೋಂ ಸುಬ್ಬಣ್ಣ | ರಾಯರದೊಡ್ಡಿ | 167/559/4 |
| 8 | ಶಮಾ ಪರ್ವೀನ್ ಕೋಂ ಇನಾಯತ್ ಉಲ್ಲಾ ಖಾನ್ | ಕೊತ್ತಿಪುರ | 800/108/6/1 |
| 9 | ಮೊಹಸಿನ್ ಕೋಂ ಎಜಾಜ್ | ಮೆಹಬೂಬ್ ನಗರ | 200/5/1449 |
| 10 | ನಜೀರ್ ಬಾನು ಕೋಂ ಮುನಾಜೀರ್ ಶರೀಫ್ | ರೆಹಮಾನಿಯಾನಗರ | 147/233/52/1 |
| 11 | ದಿಲ್ ಶಾದ್ ಬೇಗಂ ಕೋಂ ಫಯಾಜ್ ಬೇಗ್ | ಕೊತ್ತಿಪುರ | 665/46/1 |
| 12 | ತಿಮ್ಮಬೋವಿ ಬಿನ್ ತಿಮ್ಮಬೋವಿ | ಸಿಂಗ್ರಾಬೋವಿದೊಡ್ಡಿ | 34/33/222 |
| 13 | ತಹಸಿನ್ ಕೋಂ ಇಮ್ತಿಯಾಜ್ ಬೇಗ್ | ಯಾರಬ್ ನಗರ | 702/A/669/11/2 |
| 14 | ಸಾಜೀದ್ ಉನ್ನಿಸಾ ಕೋಂ ಅಬ್ದುಲ್ ಸಲಾಂ | ಕೊತ್ತಿಪುರ | 743/A/1272/11/2 |
| 15 | ಸಾಬೀರಾ ಜಾನ್ ಕೋಂ ಮುಕ್ತರ್ ಪಾಶ | ಯಾರಬ್ ನಗರ | |
| 16 | ಅಖಿಲಾ ಬೇಗಂ ಕೋಂ ಮುನೀರ್ ಅಹಮ್ಮದ್ | ಯಾರಬ್ ನಗರ | 23/190 |
| 17 | ಲಕ್ಷ್ಮಮ್ಮ ಕೋಂ ಅಪ್ಪಾಜಿ ಚಾರ್ | ಐಜೂರು | 799/2223/2030 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 18 | ಎಂ. ಅನಿತಾ ಕುಮಾರಿ ಕೋಂ ಎನ್. ಹರೀಶ್ | ವಿನಾಯಕನಗರ | 544/2717/301 |
| 19 | ಶಾಂತಮ್ಮ ಕೋಂ ಶ್ರೀನಿವಾಸ್ | ಐಜೂರು | 655 |

ವಿಷಯ 30- ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 111,112,113 ರ ಪ್ರಕಾರ ಆಸ್ತಿ ವರ್ಗಾವಣೆ ಮಾಡುವ ಅಧಿಕಾರವು ಕೌನ್ಸಿಲ್ ಗೆ ಪದತ್ತವಾಗಿದ್ದು, ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಹಸ್ತಾಂತರಿಸಲು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 30- ಕರ್ನಾಟಕ ಪುರಸಭಾ ಕಾಯ್ದೆ 1964 ರ ಪ್ರಕರಣ 111,112, ಮತ್ತು 113 ರ ಪ್ರಕಾರ ಆಸ್ತಿ ವರ್ಗಾವಣೆ ಮಾಡುವ ಅಧಿಕಾರವನ್ನು (ತಕರಾರು ಪ್ರಕರಣಗಳನ್ನು ಹೊರತು ಪಡಿಸಿ ) ಅಧ್ಯಕ್ಷರಿಗೆ ಪ್ರತ್ಯೇಜಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 31- ರಾಮನಗರ ತಾ. ಕಸಬಾ ಹೋಬಳಿ ವಡೇರಹಳ್ಳಿ ಸರ್ವೆ ನಂ. 133 ರಲ್ಲಿ 4.17 ಗುಂಟೆ ಹಾಗೂ ಸರ್ವೆ ನಂ. 134 ರಲ್ಲಿ 5.32 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಹಂಚಲು ನಗರಸಭೆಗೆ ದಿ. 08.03.1993 ರಲ್ಲಿ ಭೂಸ್ವಾಧೀನವಾಗಿದ್ದು ಕರ್ನಾಟಕ ಉಚ್ಛ ನ್ಯಾಯಾಲಯದ ಪ್ರಕರಣ ಸಂ. ಎಂ.ಎಫ್.ಎ.ನಂ. 4840/2008 (ಎಲ್ ಎ ಸಿ) ಹಾಗೂ ಎಂ.ಎಫ್.ಎ 10374/2005 (ಎಲ್.ಎ.ಸಿ) ದಿ. 13.02.2007 ರಂತೆ ರೂ. 29,97,981-00 ಗಳನ್ನು ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು ರಾಮನಗರ ರವರು ಕೋರಿರುವ ವಿಚಾರ.

ತೀರ್ಮಾನ 31- ವಿಷಯದ ಬಗ್ಗೆ ಸಭೆಗೆ ಪೂರ್ಣ ವಿವರವನ್ನು ಒದಗಿಸಲಾಯಿತು. ವಿಷಯದಲ್ಲಿ ವಿವರಿಸಿರುವ ಸರ್ವೆ ನಂಬರ್ ಗಳ ಭೂಸ್ವಾದೀನದ ಸಂಬಂಧವಾಗಿ ಈಗಾಗಲೇ ಸ್ಥಳೀಯ ನ್ಯಾಯಾಲಯದ ಆದೇಶದ ಮೇರೆಗೆ ವಿಶೇಷ ಭೂಸ್ವಾದೀನಾಧಿಕಾರಿಗಳಿಗೆ ರೂ. 6112569-00 ಗಳನ್ನು ನಗರಸಭೆಯಿಂದ ಜಮಾ ಮಾಡಲಾಗಿದೆ. ಮತ್ತೆ ಭೂಮಾಲೀಕರು ಕರ್ನಾಟಕ ಉಚ್ಛ ನ್ಯಾಯಾಲಯದಿಂದ ರೂ. 2927981-00 ಗಳನ್ನು ಹೆಚ್ಚುವರಿ ಪರಿಹಾರ ಪಾವತಿಸುವಂತೆ ಆದೇಶ ತಂದಿದ್ದು, ನಗರಸಭೆಯ ಆರ್ಥಿಕ ಪರಿಸ್ಥಿತಿಯಿಂದ ಇಷ್ಟೊಂದು ಪರಿಹಾರ ಪಾವತಿಸುವುದು ಸಾದ್ಯವಾಗದ ಮಾತೆಂದು ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರವನ್ನು ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಬಿಡುಗಡೆ ಮಾಡುವಂತೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 32- ರಾಮನಗರ ತಾಲ್ಲೂಕು ಕಸಬಾ ಹೋಬಳಿ ಐಜೂರು ಗ್ರಾಮದ ಸರ್ವೆ ನಂ. 144 ಮತ್ತು 145 ರಲ್ಲಿ ಒಟ್ಟು ವಿಸ್ತೀರ್ಣ 16.19 ಗುಂಟೆ ಪ್ರದೇಶವನ್ನು ಆಶ್ರಯ ಯೋಜನೆಯಡಿ ನಿವೇಶನ ಹಂಚಲು ಭೂಸ್ವಾಧೀನ ಪಡಿಸಿಕೊಂಡಿದ್ದು, ಭೂಸ್ವಾಧೀನಪಡಿಸಿಕೊಂಡ ದಿನಾಂಕದಿಂದ ಬಡ್ಡಿ ಸೇರಿಸಿ ರೂ. 35,28,449-00 ರೂ.ಗಳ ಹೆಚ್ಚುವರಿ ಪರಿಹಾರ ಭೂ ಮಾಲೀಕರಿಗೆ ನೀಡಲು ಘನ ನ್ಯಾಯಾಲಯದ ತೀರ್ಪಿನಂತೆ ಭೂಸ್ವಾಧೀನಾಧಿಕಾರಿಗಳು ರಾಮನಗರ ಇವರ ಪತ್ರ ಸಂ. ಎಲ್ ಎ ಸಿ/148/149/7576, ದಿ 28.12.2007 ರಂತೆ ಪತ್ರ ಬರೆದಿದ್ದು, ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 32- ವಿಷಯದ ಬಗ್ಗೆ ಸಭೆಗೆ ಪೂರ್ಣ ವಿವರವನ್ನು ಒದಗಿಸಲಾಯಿತು. ನ್ಯಾಯಾಲಯದಿಂದ ಹೆಚ್ಚುವರಿ ಪರಿಹಾರ ಮತ್ತು ಬಡ್ಡಿ ರೂ. 3528449-00 ಗಳನ್ನು ಪಾವತಿಸಲು ಆದೇಶವಾಗಿದ್ದು, ನಗರಸಭೆಯ ಆರ್ಥಿಕ ಪರಿಸ್ಥಿತಿಯಿಂದ ಇಷ್ಟೊಂದು ಪರಿಹಾರ ಪಾವತಿಸುವುದು ಸಾಧ್ಯವಾಗದ ಮಾತೆಂದು ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರವನ್ನು ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಬಿಡುಗಡೆ ಮಾಡುವಂತೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. ಈಗಾಗಲೇ ಈ ಕಛೇರಿಯಿಂದ ದಿ. 31.07.2006 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಅರೇ ಸರ್ಕಾರಿ ಪತ್ರದ ಮೂಲಕ ರೂ. 7496458-00 ಗಳನ್ನು ಬಿಡುಗಡೆ ಮಾಡಿಸುವ ಕೋರಲಾಗಿದ್ದು, ಮಾನ್ಯ ಜಿಲ್ಲಾಧಿಕಾರಿಗಳರವರು ಪೌರಾಡಳಿತ ನಿರ್ದೇಶನಾಲಯಕ್ಕೆ ದಿ. 03.08.2006 ರಂದು ಅನುದಾನ ಬಿಡುಗಡೆಗೆ ಪತ್ರ ಬರೆದಿದ್ದು, ಪೌರಾಡಳಿತ ನಿರ್ದೇಶನಾಲಯವು ಸರ್ಕಾರಕ್ಕೆ ದಿ. 18.09.2006 ರಂದು ಪತ್ರ ಬರೆದಿದ್ದು, ಸರ್ಕಾರದಲ್ಲಿ ಕಡತ ಬಾಕಿ ಇದ್ದು ಈ ಸಂಬಂಧ ಮಾನ್ಯ ಶಾಸಕರನ್ನು ಸರ್ಕಾರದ ಮಟ್ಟದಲ್ಲಿ ಅನುದಾನ ಬಿಡುಗಡೆ ಮಾಡಿಸುವಂತೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 33- ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯದ ಪತ್ರದ ಸಂ. ಎಲ್ಎಕ್ಯೂ/ಎಸ್ಆರ್/1058/81-81, ದಿ 16.04.2008 ರ ಪತ್ರದಂತೆ ರಾಮನಗರ ತಾ. ಕಸಬಾ ಹೋಬಳಿ ಅರ್ಚಕರಹಳ್ಳಿ ಗ್ರಾಮದ ಸರ್ವೆ ನಂ. 136-1 ರಲ್ಲಿ 2.00 ಎಕರೆ ಜಮೀನನ್ನು ಗ್ರಾಮ ಬಡಾವಣೆಗೆ ಸ್ವಾದೀನಪಡಿಸಿಕೊಂಡಿದ್ದು ಹೆಚ್ಚುವರಿ ಪರಿಹಾರ ಕೋರಿ ಶ್ರೀ ಲಿಂಗಯ್ಯ ಬಿನ್ ಸೋಮಯ್ಯ ಎಂಬುವರು ಜೆ.ಎಂ. ಎಫ್.ಸಿ ನ್ಯಾಯಾಲಯ, ರಾಮನಗರ ರವರಲ್ಲಿ ದಾವೆ ಹೂಡಲಾಗಿ ಹೆಚ್ಚುವರಿ ಪರಿಹಾರ ರೂ. 59,330-00 ರೂ.ಗಳನ್ನು ಜಮಾ ಮಾಡಲು ಕೋರಿರುವ ಮೇರೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 33- ಈ ಪ್ರಕರಣ ಅರ್ಚಕರಹಳ್ಳಿ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಾಗಿದ್ದು, ಇದು 1980-81 ವರ್ಶದ ಪ್ರಕರಣವಾಗಿದ್ದು, ಇದರಿಂದ ಬಂದಂತಹ ಆದಾಯವನ್ನು ಗ್ರಾಮ ಪಂಚಾಯಿತಿ ಪಡೆದಿದ್ದು, 15 ವರ್ಶಗಳ ನಂತರ 1995-96 ರಲ್ಲಿ ನಗರಸಭೆ ಗಡಿ ವಿಸ್ತರಣೆ ಸಂದರ್ಭದಲ್ಲಿ ನಗರಸಭಾ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ ವಿನಃ ಇದಕ್ಕೆ ನಗರಸಭೆ ಹೊಣೆಗಾರರಾಗಲು ಸಾಧ್ಯವಿಲ್ಲವೆಂದು ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ವಸೂಲಾತಿಸಿಕೊಳ್ಳುವಂತೆ ವಿಶೇಸ ಭೂಸ್ವಾದೀನಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 34- ನಗರಸಭಾ ಘನತ್ಯಾಜ್ಯ ವಸ್ತು ವಿಲೇವಾರಿ ವಾಹನ ಕೆ.ಎ-05, ಎ-6607, ದುರಸ್ಥಿಗೆ ಬಂದಿದ್ದು, ವಾಹನ ದುರಸ್ಥಿಯಾಗುವವರೆಗೆ ಎಸ್ ಆರ್ ಆಧಾರದ ಮೇಲೆ ಕೋಟೇಶನ್ ಕರೆದು ದಿನಕ್ಕೆ ರೂ. 1200-00 ರಂತೆ ಟ್ರಾಕ್ಟರ್ ಬಾಡಿಗೆ ತೆಗೆದುಕೊಂಡು ಕಸ ಸಾಗಿಸುತ್ತಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ ಮತ್ತು ಘನತ್ಯಾಜ್ಯ ವಿಲೇವಾರಿ ವಾಹನ ಸಂಖ್ಯೆ ಕೆ.ಎ-05, ಎ-6607ನ್ನು ದುರಸ್ಥಿಗೊಳಿಸಿದ್ದು, ಅನುಸಮರ್ಥನಗೊಳಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 34- ವಿಷಯವನ್ನು ಪರಿಶೀಲಿಸಲಾಯಿತು. ಸಾರ್ವಜನಿಕ ಹಿತದೃಷ್ಟಿಯ ಮೇರೆಗೆ ನಗರಸಭಾ ಘನತ್ಯಾಜ್ಯ ವಿಲೇವಾರಿ ವಾಹನ ಸಂಖ್ಯೆ ಕೆಎ-05 ಎ-6607, ದುರಸ್ತಿಯಾಗುವವರೆಗೆ ಟ್ರಾಕ್ಟರ್ ಬಾಡಿಗೆ ತೆಗೆದುಕೊಂಡು ಕಸ ಸಾಗಿಸಿರುವುದನ್ನು ಮತ್ತು ವಾಹನ ಸಂಖ್ಯೆ ಕೆಎ-05 ಎ-6607 ನ್ನು ದುರಸ್ತಿಗೊಳಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.

0

ವಿಷಯ 35- ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗಾಗಿ ಡಂಪರ್ ಪ್ಲೇಸರ್ ಕಂಟೈನರ್ ಗಳ ಖರೀದಿಗೆ ಬಂದಿರುವ ಟೆಂಡರ್ ಗಳಲ್ಲಿ ಕಡಿಮೆ ದರ ನಮೂದಿಸಿರುವ ಮೆ. ಮಾಡಲ್ ಮೆಕಾನಿಜಂ, ಬೆಂಗಳೂರು ರವರ ಟೆಂಡರ್ ಅನುಮೋದಿಸುವ ವಿಚಾರ.

ತೀರ್ಮಾನ 35- ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗಾಗಿ ಡಂಪರ್ ಪ್ಲೇಸರ್ ಕಂಟೈನರ್ ಗಳ ಸರಬರಾಜಿಗಾಗಿ ಬಂದಿರುವ ಟೆಂಡರ್ ಗಳ ಆರ್ಥಿಕ ಪ್ರಸ್ತಾವನೆ ವಿವರ ಕೆಳಕಂಡಂತಿರುತ್ತದೆ.

| ಕ್ರ.ಸಂ | ವಿವರ | ಟೆಂಡರ್ ದಾರರು ನಮೂದಿಸಿರುವ ದರ ರೂ. | |
|---|---|---|---|
| | | ಮಾಡಲ್ ಮೆಕ್ಯಾನಿಸಂ, ಬೆಂಗಳೂರು | ಸೂರ್ಯ ಪ್ರೀಸಿಶನ್ ಇಂಜಿನಿಯರಿಂಗ್, ಮೈಸೂರು |
| 1 | 3 ಕ್ಯೂಬಿಕ್ ಮೀ. ಡಂಪರ್ ಪ್ಲೇಸರ್ ಕಂಟೈನರ್ 1 ಕ್ಕೆ | 42,876/- | 58,950/- |

ಮೇಲ್ಕಂಡಂತೆ ಮಾಡಲ್ ಮೆಕ್ಯಾನಿಸಂ, ಬೆಂಗಳೂರು ರವರು ಅತ್ಯಂತ ಕಡಿಮೆ ದರ ನಮೂದಿಸಿದ್ದು, ಸದರಿಯವರ ಪ್ರಸ್ತಾವನೆಯನ್ನು ಅನುಮೋದಿಸಲು ಮಾನ್ಯ ಜಿಲ್ಲಾಧಿಕಾರಿರವರಿಗೆ ಪತ್ರ ಬರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 36- ನಗರಸಭೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗಾಗಿ ವಾರ್ಶಿಕ ಟೆಂಡರ್ ಆಧಾರದ ಮೇಲೆ ಅವಶ್ಯಕತೆಗೆ ಅನುಗುಣವಾಗಿ ಒಂದ ಜೆ.ಸಿ.ಬಿ ಯಂತ್ರವನ್ನು ಬಾಡಿಗೆಗೆ ಪಡೆಯುವ ವಿಚಾರ.

ತೀರ್ಮಾನ 36- ವಿಷಯವನ್ನು ಪರಿಶೀಲಿಸಲಾಗಿ ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ತ್ಯಾಜ್ಯವನ್ನು ಮಟ್ಟ ಮಾಡಲು ನಗರಸಭೆಯಲ್ಲಿ ಲಭ್ಯವಿರುವ ಡೋಸರ್ ನಿಂದ ಸಾಧ್ಯವಿಲ್ಲವಿರುವುದರಿಂದ ಪದೇಪದೇ ಜೆಸಿಬಿ ಯಂತ್ರವನ್ನು ಕೋಟೇಶನ್ ಆಧಾರದ ಮೇಲೆ ಬಾಡಿಗೆ ಪಡೆದು ಕೆಲಸ ನಿರ್ವಹಿಸುವುದು ಕಷ್ಟವಾದ್ದರಿಂದ ಮತ್ತು ನಗರಸಭಾ ಆರ್ಥಿಕ ದೃಷ್ಟಿಯಿಂದಲು ಎಸ್.ಆರ್ ದರದ ಆಧಾರದ ಮೇಲೆ ನಿಯಾಮಾನುಸಾರ ವಾರ್ಷಿಕ ಟೆಂಡರ್ ಕರೆದು ಜೆಸಿಬಿ ಬಾಡಿಗೆ ಪಡೆಯುವುದು ಸೂಕ್ತವಾದ್ದರಿಂದ ಸಭೆಯು ಸರ್ವಾನುಮತದಿಂದ ವಾರ್ಷಿಕ ಟೆಂಡರ್ ಕರೆದು ಕ್ರಮ ವಹಿಸಲು ಒಪ್ಪಿಗೆ ನೀಡಿತು.

ವಿಷಯ 37- ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ತಳ್ಳುಗಾಡಿ (ಪ್ಲಾಸ್ಟಿಕ್ ಬಿನ್ ಸಹಿತ) ಗಳನ್ನು ಖರೀದಿಸಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 37- ಘನತ್ಯಾಜ್ಯ ವಸ್ತುವನ್ನು ಸಾಗಾಣಿಕೆಗಾಗಿ ಇಕ್ಕಟ್ಟಿನ ಸ್ಥಳಗಳಲ್ಲಿ ತ್ರಿಚಕ್ರ ತಳ್ಳುಗಾಡಿಗಳ (ಪ್ಲಾಸ್ಟಿಕ್ ಬಿನ್ ಸಹಿತ) ಅಗತ್ಯವಿದ್ದುದ್ದನ್ನು ಪರಿಗಣಿಸಿ ನಿಯಾಮಾನುಸಾರ 15 ಗಾಡಿಗಳು 50 ಲೀಟರ್ ನ ಪ್ಲಾಸ್ಟಿಕ ಬಿನ್ ಗಳನ್ನು ರೂ. 74250-00 ಗಳಿಗೆ ಖರೀದಿಸಿರುವುದನ್ನು ಸಭೆಯು ಒಪ್ಪಿ ಅನುಸಮರ್ಥನಗೊಳಿಸಲಾಯಿತು

ವಿಷಯ 38- ನಗರಸಭಾ ವ್ಯಾಪ್ತಿಯಲ್ಲಿರುವ ಉದ್ದಿಮೆ ಪರವಾನಗಿ ಜಾಹಿರಾತು ಹಾಗೂ ಕಟ್ಟಡ ಪರವಾನಗಿ ಶುಲ್ಕ ಪರಿಷ್ಕರಿಸಿ (ಬೈಲಾ ಪರಿಷ್ಕರಿಸಿ) ಗೆಜೆಟ್ ಮೂಲಕ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸುವ ವಿಚಾರ.

ತೀರ್ಮಾನ 38 (ಅ)- ನಗರಸಭಾ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಗಿ ಶುಲ್ಕವನ್ನು ಸುಮಾರು ವರ್ಷಗಳಿಂದ ಪರಿಷ್ಕರಣೆ ಮಾಡದೇ ನಗರಸಭೆಗೆ ಆರ್ಥಿಕವಾಗಿ ನಷ್ಟ ಉಂಟಾಗಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ವಿವರಿಸಿದರು. ನಗರಸಭೆಗೆ ಆರ್ಥಿಕ ಸಂಪನ್ಮೂಲ ಬಲಪಡಿಸುವ ದೃಷ್ಟಿಯಿಂದ ಕಟ್ಟಡ ಪರವಾನಗಿ ಶುಲ್ಕವನ್ನು ಈ ಕೆಳಕಂಡಂತೆ ವಿವಿಧ ರೀತಿಯ ಕಟ್ಟಡಗಳಿಗೆ ದರಗಳನ್ನು ಪರಿಷ್ಕರಿಸಿರುವ ವಿವರಣೆಯನ್ನು ಸಭೆಗೆ ಓದಿ ತಿಳಿಸಲಾಯಿತು. ಮಾನ್ಯ ಸದಸ್ಯರುಗಳು ಈ ಬಗ್ಗೆ ಮಾತನಾಡಿ ನಗರಸಭೆ ಆರ್ಥಿಕ ದೃಷ್ಟಿಯಿಂದ ಮಂಡಿಸಿರುವ ಪರಿಷ್ಕೃತ ದರಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಸದರಿ ಪರಿಷ್ಕೃತ ದರವನ್ನು ನಿಯಾಮಾನುಸಾರ ಕ್ರಮ ಕೈಗೊಂಡು ಗೆಜೆಟ್ ನಲ್ಲಿ ಪ್ರಕಟಣೆ ಹೊರಡಿಸಿ ಆಕ್ಷೇಪಣೆಗಳನ್ನು ಸ್ವೀಕರಿಸಲು ದಿನಾಂಕಗಳನ್ನು ನಿಗದಿಪಡಿಸಿ ಕ್ರಮ ಕೈಗೊಳ್ಳುವಂತೆ ಸಭೆಯು ಅನುಮೋದನೆ ನೀಡಿತು.

| ಕ್ರ.ಸಂ | ಕಟ್ಟಡ ಪರವಾನಗಿ ಮತ್ತು ನವೀಕರಣ | ಹಾಲಿ ಇರುವ ದರ | ಪರಿಷ್ಕೃತ ದರ |
|---|---|---|---|
| ಎ | **<u>ಆರ್.ಸಿ.ಸಿ ಕಟ್ಟಡ (ಗೃಹ ಬಳಕೆ)</u>** | ಚ.ಮೀ. ಒಂದಕ್ಕೆ 10 ರೂ. ನಂತೆ | |
| | 1) 1 ಚ.ಮೀ. ನಿಂದ 5 ಚ.ಮೀ. ವರೆಗೆ | | 250.00 |
| | 2) 05ಚ.ಮೀ. ನಿಂದ 10 ಚ.ಮೀ. ವರೆಗೆ | | 350-00 |
| | 3) 10 ಚ.ಮೀ. ನಿಂದ 15ಚ.ಮೀ. ವರೆಗೆ | | 400-00 |
| | 4) 15 ಚ.ಮೀ. ನಿಂದ ಮೇಲ್ಪಟ್ಟು ಒಂದು ಚ.ಮೀ.ಗೆ | | 75-00 |
| ಬಿ | **<u>ವಾಣಿಜ್ಯ ಆರ್.ಸಿ.ಸಿ. ಕಟ್ಟಡ</u>** | | |
| | 1) 1 ಚ.ಮೀ. ನಿಂದ 5 ಚ.ಮೀ. ವರೆಗೆ | | 300-00 |
| | 2) 05ಚ.ಮೀ. ನಿಂದ 10 ಚ.ಮೀ. ವರೆಗೆ | | 400-00 |
| | 3) 10 ಚ.ಮೀ. ನಿಂದ 15ಚ.ಮೀ. ವರೆಗೆ | | 450-00 |
| | 4) 15 ಚ.ಮೀ. ನಿಂದ ಮೇಲ್ಪಟ್ಟು ಒಂದು ಚ.ಮೀ.ಗೆ | | 125-00 |
| ಸಿ. | **<u>ಜಂಕ್ ಶೀಟ್ ಅಥವಾ ಮಂಗಳೂರು ಹೆಂಚಿನ ಮನೆ</u>** | | |
| | 1) 1 ಚ.ಮೀ. ನಿಂದ 5 ಚ.ಮೀ. ವರೆಗೆ | | 150-00 |
| | 2) 05ಚ.ಮೀ. ನಿಂದ 10 ಚ.ಮೀ. ವರೆಗೆ | | 250-0 |
| | 3) 10 ಚ.ಮೀ. ನಿಂದ 15ಚ.ಮೀ. ವರೆಗೆ | | 300-00 |
| | 4) 15 ಚ.ಮೀ. ನಿಂದ ಮೇಲ್ಪಟ್ಟು ಒಂದು ಚ.ಮೀ.ಗೆ | | 75-00 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| | **ಆರ್.ಸಿ.ಸಿ ಕಟ್ಟಡ 1ನೇ ಫ್ಲೋರ್**<br>1) 1 ಚ.ಮೀ. ನಿಂದ 25 ಚ.ಮೀ. ವರೆಗೆ<br>2) 25ಚ.ಮೀ. ನಿಂದ ಮೇಲ್ಪಟ್ಟು ಪ್ರತಿ 5 ಚ.ಮೀ. ವರೆಗೆ | | 500-00<br>50-00 |
| | **ಆರ್.ಸಿ.ಸಿ ಕಟ್ಟಡ 2ನೇ ಮತ್ತು 3ನೇ ಫ್ಲೋರ್**<br>1) 1 ಚ.ಮೀ. ನಿಂದ 25 ಚ.ಮೀ. ವರೆಗೆ<br>2) 25ಚ.ಮೀ. ನಿಂದ ಮೇಲ್ಪಟ್ಟು ಪ್ರತಿ 5 ಚ.ಮೀ. ವರೆಗೆ | | 400-00<br>45-00 |
| ಎಫ್ | **ಆರ್.ಸಿ.ಸಿ ಕಟ್ಟಡ 4ನೇ ಮತ್ತು 5ನೇ ಫ್ಲೋರ್**<br>1) 1 ಚ.ಮೀ. ನಿಂದ 25 ಚ.ಮೀ. ವರೆಗೆ<br>2) 25ಚ.ಮೀ. ನಿಂದ ಮೇಲ್ಪಟ್ಟು ಪ್ರತಿ 5 ಚ.ಮೀ.ಗೆ | | 500-00<br>45-00 |
| ಜಿ | ನವೀಕರಣ ಕಟ್ಟಡ ಪರವಾನಗಿ<br>ಈ ಹಿಂದೆ ಪಾವತಿಸಿದ ಒಟ್ಟು ದರ | | -- |
| ಎಚ್ | ನೀಲಿ ನಕಾಕ್ಷೆ ಫೀ 1ಕ್ಕೆ<br>ಹೆಚ್ಚುವರಿ ನಕಲು 1 ಕ್ಕೆ | | 50-00<br>25-00 |
| ಐ | ಡಬ್ರೀಸ್ ಪ್ರತಿ ಚ.ಮೀ.ಗೆ | | 60-00 |
| ಜೆ | ನೆಲಬಾಡಿಗೆ ಪ್ರತಿ ಚ.ಮೀ.ಗೆ (ವಾಣಿಜ್ಯ) | | 75-00 |
| ಕೆ. | **ಚಾರಿಟಬಲ್ ಟ್ರಸ್ಟ್**<br>1 ಚ. ಮೀ.ನಿಂದ 150 ಚ.ಮೀ.ಗೆ<br>150 ಚ. ಮೀ.ಗಿಂತ ಮೇಲ್ಪಟ್ಟು ಪ್ರತಿ ಚ.ಮೀ.ಗೆ | | 100-00<br>10-00 |
| ಎಲ್ | 1) ಚಿತ್ರಮಂದಿರ ಮತ್ತು ಕೈಗಾರಿಕಾ ಕಟ್ಟಡ ಪರವಾನಗಿ 1 ಚ.ಮೀ.ಗೆ<br>2) ಚಿತ್ರಮಂದಿರ ಮನೆ ಕೈಗಾರಿಕ ಕಟ್ಟಡ ಪರವಾನಗಿ ಕಾಂಪೌಂಡ್ ವಾಲ್ | | 20-00<br>5-00 |
| ಎಂ | ಕಾಂಪೌಂಡ್ ನಿರ್ಮಾಣ ಯಾವುದೇ ರನ್ನಿಂಗ್ ಮೀಟರ್ ಗೆ | | 15-00 |
| ಎನ್ | ನೆಲಬಾಡಿಗೆ ಚದರ ಮೀಟರ್ ಗೆ | 250-00 | 2-00 |
| ಒ | **ರಸ್ತೆ ಕಟಿಂಗ್**<br>ಸೀಮೆಂಟ್ ರಸ್ತೆ ಪ್ರತಿ ಮೀ.<br>ಡಾಂಬರ್ ರಸ್ತೆ ಪ್ರತಿ ಮೀ.ಗೆ<br>ಜಲ್ಲಿ ರಸ್ತೆ ಪ್ರತಿ ಮೀ. ಗೆ<br>ಮಣ್ಣಿನ ರಸ್ತೆ ಪ್ರತಿ ಮೀ.ಗೆ | 430-00<br>265-00<br>75-00 | 5000-00<br>500-00<br>300-00<br>120-00 |
| ಪಿ | ಕಟ್ಟಡ ಮೌಲ್ಯ ದೃಢೀಕರಣ ಹಾಗೂ ಇತರೇ ದೃಢೀಕರಣ ಪತ್ರಗಳಿಗೆ | | 250-00 |

PDF Created with deskPDF PDF Writer - Trial :: http://www.docudesk.com

ಸರ್ಕಾರದ ಅಧಿಸೂಚನೆ ಸಂ. ಇಎನ್ 396 ಎನ್ ಸಿಇ 2006 ದಿ. 13.11.2007 ರ ಮೇರೆಗೆ ಕೆಳಕಂಡ ಕಟ್ಟಡಗಳಿಗೆ ಸೋಲಾರ್ ವಾಟರ್ ಹೀಟರ್ ಬಳಕೆ ಕಡ್ಡಾಯಗೊಳಿಸುವ ಸಂಬಂಧ ಕಟ್ಟಡ ಪರವಾನಗಿ ಬೈಲಾದಲ್ಲಿ ಅಳವಡಿಸಿಕೊಳ್ಳುವುದೆಂದು ಸಭೆಯು ತೀರ್ಮಾನಿಸಿತು. ( ತೀರ್ಮಾನ ಸಂಖ್ಯೆ 4(ಅ) ದಿ. 11.06.2008)

1. ಪರಿಸ್ಕರಣೆಗೆ ಬಿಸಿ ನೀರು ಅಗತ್ಯವಿರುವ ಉದ್ಯಮಗಳು
2. ಎಲ್ಲಾ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು
3. ಹೋಟೆಲ್ ಗಳು ಬ್ರಾಂಕ್ವಿಟ್ ಹಾಲ್ ಗಳು ಮತ್ತು ಅತಿಥಿ ಗೃಹಗಳು
4. ಜೈಲ್ ಬ್ಯಾರಕ್ ಗಳು ಮತ್ತು ಕ್ಯಾಂಟೀನ್ ಗಳು
5. ಸಮೂಹ ಗೃಹ ನಿರ್ಮಾಣ ಸಂಘಗಳು-ಗೃಹಮಂಡಳಿಗಳಿಂದ ನಿರ್ಮಿಸಲಾದ ವಸತಿ ಸಂಕೀರ್ಣಗಳು.
6. 600 ಚ.ಅಡಿ ನೆಲ ಪ್ರದೇಶ ಅಥವಾ 1200 ಚದರಡಿ ಮತ್ತು ಮೇಲ್ಪಟ್ಟ ನಿವೇಶನದ ಪ್ರದೇಶದ ಮೇಲೆ ನಿರ್ಮಿಸಲಾದ ಎಲ್ಲಾ ವಸತಿ ಕಟ್ಟಡಗಳು
7. ಪಾಲಿಕೆಗಳ ಮಿತಿಯೊಳಗೆ ಬರುವ ಕಟ್ಟಡಗಳು ಸರ್ಕಾರದ ಎಲ್ಲಾ ಕಟ್ಟಡಗಳು
8. ವಸತಿ ಶಾಲೆಗಳು, ಕಾಲೇಜುಗಳು, ವಿಶ್ವ ವಿದ್ಯಾಲಯಗಳು, ವಿದ್ಯಾರ್ಥಿ ನಿಲಯಗಳು
9. ತಾಂತ್ರಿಕ ಸಂಸ್ಥೆಗಳು, ವೃತ್ತಿಪರ ತರಭೇತಿ ಸಂಸ್ಥೆಗಳು, ಪ್ರವಾಸೋದ್ಯಮ ಸಂಕೀರ್ಣಗಳು, ಸಮುದಾಯ ಕೇಂದ್ರಗಳು ಮತ್ತು ಕಲ್ಯಾಣ ಮಂಟಪಗಳು ಇತ್ಯಾದಿ.

ತೀರ್ಮಾನ 38 (ಆ)- ನಗರಸಭಾ ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ಶುಲ್ಕವನ್ನು ಸುಮಾರು ವರ್ಷಗಳಿಂದ ಪರಿಷ್ಕರಣೆ ಮಾಡದೇ ನಗರಸಭೆಗೆ ಆರ್ಥಿಕವಾಗಿ ನಷ್ಟ ಉಂಟಾಗಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ವಿವರಿಸಿದರು. ನಗರಸಭೆಗೆ ಆರ್ಥಿಕ ಸಂಪನ್ಮೂಲ ಬಲಪಡಿಸುವ ದೃಷ್ಟಿಯಿಂದ ಉದ್ದಿಮೆ ಪರವಾನಗಿ ಶುಲ್ಕವನ್ನು ಈ ಕೆಳಕಂಡಂತೆ ವಿವಿಧ ರೀತಿಯ ಉದ್ದಿಮೆಗಳಿಗೆ ದರಗಳನ್ನು ಪರಿಷ್ಕರಿಸಿರುವ ವಿವರಣೆಯನ್ನು ಸಭೆಗೆ ಓದಿ ತಿಳಿಸಲಾಯಿತು. ಮಾನ್ಯ ಸದಸ್ಯರುಗಳು ಈ ಬಗ್ಗೆ ಮಾತನಾಡಿ ನಗರಸಭೆ ಆರ್ಥಿಕ ದೃಷ್ಟಿಯಿಂದ ಮಂಡಿಸಿರುವ ಪರಿಷ್ಕೃತ ದರಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಸದರಿ ಪರಿಷ್ಕೃತ ದರವನ್ನು ನಿಯಾಮಾನುಸಾರ ಕ್ರಮ ಕೈಗೊಂಡು ಗೆಜೆಟ್ ನಲ್ಲಿ ಪ್ರಕಟಣೆ ಹೊರಡಿಸಿ ಆಕ್ಷೇಪಣೆಗಳನ್ನು ಸ್ವೀಕರಿಸಲು ದಿನಾಂಕಗಳನ್ನು ನಿಗದಿಪಡಿಸಿ ಕ್ರಮ ಕೈಗೊಳ್ಳುವಂತೆ ಸಭೆಯು ಅನುಮೋದನೆ ನೀಡಿತು.

| ಕ್ರ. ಸಂ. | **ಉದ್ದಿಮೆ ವಿವರ** | ಹಾಲಿ ಇರುವ ದರ | ಪರಿಷ್ಕರಣೆ ದರ |
|---|---|---|---|
| I | ಆಹಾರ ಪದಾರ್ಥ ಮತ್ತು ಪಾನೀಯ ವಸ್ತುಗಳು | | |
| 1. | ಬೀಡಾ ಸ್ಟಾಲ್ | | 100 |
| 2. | ಬಾಳೆ ಹಣ್ಣು ಹೋಲ್ ಸೇಲ್ ಮಾರಾಟ | | 500 |
| 3. | ಕೋಳಿ ಮೊಟ್ಟೆ ಅಂಗಡಿ | | 200 |
| 4. | ಪುರಿ ಬಟ್ಟಿ, ಕಡಲೇ ಕಾಯಿ ಬಟ್ಟಿ | 250 | 250 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 5. | ಬ್ರೆಡ್, ಬಿಸ್ಕತ್ ವಿದ್ಯುತ್ ಇಲ್ಲದೆ ತಯಾರಿಕೆ | 200 | 500 |
| 6. | ಬ್ರೆಡ್ ಬಿಸ್ಕತ್ ವಿದ್ಯುತ್ ಇಂದ ತಯಾರಿಸಿದ್ದು. | | 1000 |
| 7. | ಬ್ರೆಡ್,ಬಿಸ್ಕತ್, ಶೇಖರಣೆ ಮತ್ತು ಮಾರಾಟ ಅಂಗಡಿಗಳು | 250 | 500 |
| 8. | ಅಡಿಗೆ, ಅಡಿಗೆಯೇತರ ಎಣ್ಣೆ ಮಿಲ್ಲುಗಳು ಉತ್ಪಾದನೆ, ಸಂಸ್ಕರಣೆ | 1000 | 2500 |
| 9. | ಅಡಿಗೆ, ಅಡಿಗೆಯೇತರ ಎಣ್ಣೆ ದಾಸ್ತಾನುಗಾರರು, ಸಗಟು ವ್ಯಾಪಾರ | | 1000 |
| 10. | ಅಡಿಗೆ, ಅಡಿಗೆಯೇತರ ಎಣ್ಣೆಗಳ ಚಿಲ್ಲರೆ ಮಾರಟ | 200 | 500 |
| 11. | ಸೂಪರ್ ಮಾರ್ಕೆಟ್ (ಸ್ವ-ಸೇವೆ ಮಳಿಗೆಗಳು) | | 5000 |
| 12. | ದಿನಸಿ ಅಂಗಡಿ<br>ಎ) ಸೇವಾ ಪ್ರದೇಶಗಳ 500 ಅಡಿಗಿಂತ ಹೆಚ್ಚಿನದು<br>ಬಿ)ಸೇವಾ ಪ್ರದೇಶಗಳ 500 ಅಡಿಗಿಂತ ಕಡಿಮೆ | 150 | 500<br>300 |
| 13. | ಬೆಣ್ಣೆ, ತುಪ್ಪ ಮಾರಾಟ | | 250 |
| 14. | ಮದ್ಯಸೇವೆ, ಹೋಟೆಲ್, ರೆಸ್ಟೋರೆಂಟ್ ಗಳು<br>1. ಬಾರ್ ಹೊಂದಿರುವ ಹವಾ ನಿಯಂತ್ರಿತ ಹೋಟೆಲ್<br>2. ಬಾರ್ ಹೊಂದಿರುವ ಹವಾ ನಿಯಂತ್ರಿತವಲ್ಲದ ಹೋಟೆಲ್<br>3. ಹವಾ ನಿಯಂತ್ರಿತ ಹೋಟೆಲ್<br>4. ಹವಾ ನಿಯಂತ್ರಿತವಲ್ಲದ ಹೋಟೆಲ್ (ದರ್ಶಿನಿ ಮಾದರಿ ಸೇರಿದಂತೆ)<br>5. ಕಾರ್ಖಾನೆಗಳಲ್ಲಿ, ನರ್ಸಿಂಗ್ ಹೋಂಗಳಲ್ಲಿ ಮತ್ತು | 500 | 10000<br>5000<br>5000<br>1000<br>500 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| | ಮಂದಿರಗಳಲ್ಲಿರುವ ಕ್ಯಾಂಟಿನ್ ಗಳು<br>6. ಕಾಫಿ, ಟೀಸ್ಟಾಲ್ ಗಳು<br>7. ಊಟ ಮಾಡುವ ಮೆಸ್ ಗಳು | 150 | 200<br>250 |
| 15. | ಗೃಹ ಕೈಗಾರಿಕೆಯ ಉಪ್ಪಿನಕಾಯಿ, ಅಪ್ಪಳ, ಜ್ಯಾಮ್, ಊದುಬತ್ತಿ ಮುಂತಾದ ತಯಾರಿಕೆ, ಪ್ಯಾಕೀಂಗ್ ಶೇಖರಣೆ | | 500 |
| 16. | ಹಾಲಿನ ಡೈರಿ | | 500 |
| 17 | ಹಾಲಿನ ಚಿಲ್ಲರೆ ಮಾರಾಟ ಕೌಂಟರ್ ಗಳು | | 200 |
| 18. | **ಮಾಂಸ ಮಾರಾಟ**<br>1. ಕೋಳಿ ಮಾಂಸ ಮೀನು ಮಾರಾಟ<br>2. ಕುರಿ, ಮೆಕೆ ಮಾಂಸ ಮಾರಾಟ<br>3. ದನ ಮಾಂಸ<br>4. ಹಂದಿ ಮಾಂಸ | 750<br>1000<br>1000<br>1000 | 1000<br>1000<br>1000<br>1000 |
| 19. | ಅನಿಲಗೂಡಿದ ನೀರು, ಲಘು ಪಾನೀಯಗಳು ಮತ್ತು ಬಾಟಲ್ ನೀರಿನ ಸಗಟು ವ್ಯಾಪಾರ, ದಾಸ್ತಾನುದಾರರು | | 5000 |
| 20. | ಎ. ಅಲ್ಕೋಹಾಲ್ ಸಗಟು ದಾಸ್ತಾನುದಾರರು<br>ಬಿ. ಆಲ್ಕೋಹಾಲ್ ಚಿಲ್ಲರೆ ಮಾರಾಟ | 1000 | 15000<br>2000 |
| 21. | ಕಾಫಿ, ಟೀ ಸಂಸ್ಕರಣೆ ಮತ್ತು ಮಾರಾಟ | | 500 |
| 22. | ಐಸ್ ಕ್ರೀಂ ಮಾರಾಟ | | 500 |
| 23. | ಐಸ್ ಮತ್ತು ಐಸ್ ಕ್ಯಾಂಡಿ ತಯಾರಕರು | 150 | 1000 |
| | **ಆಹಾರೇತರ ಪದಾರ್ಥಗಳು** | 150 | |
| 1. | ಬೋರ್ಡಿಂಗ್ ಮತ್ತು ಲಾಡ್ಜಿಂಗ್<br>1. 20 ಕೋಣೆಗಳಿಗಿಂತ ಕಡಿಮೆ | 500 | 1000 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| | 2. 20 ಕೋಣೆಗಳಿಗಿಂತ ಹೆಚ್ಚು | 1000 | 2000 |
| 2. | **ಲಾಡ್ಜಿಂಗ್ ಮಾತ್ರ**<br>1. 20 ಕೋಣೆಗಳಿಗಿಂತ ಹೆಚ್ಚು<br>2. 20. ಕೋಣೆಗಳಿಗಿಂತ ಕಡಿಮೆ | 1000<br>500 | 2000<br>1000 |
| 3. | **ಛತ್ರಗಳು, ಮದ್ಯಮ ಮಂಡಿಗಳು**<br>1. 5000 ಚ.ಅಡಿ<br>2. 5000 ಚ.ಅಡಿ | | 5000<br>2500 |
| 4. | ಸಮುದಾಯ ಭವನ, ಪಾರ್ಟಿಹಾಲ್ | | 2500 |
| 5. | **ನರ್ಸಿಂಗ್ ಹೋಂ ಮತ್ತು ಅಸ್ಪತ್ರೆ**<br>1. 20 ಬೆಡ್ ಗಳಿಗಿಂತ ಹೆಚ್ಚು<br>2. 20 ಬೆಡ್ ಗಳಿಗಿಂತ ಕಡಿಮೆ | | 2000<br>1000 |
| 6. | ರೋಗ ಲಕ್ಷಣ ಪತ್ತೆ ಹಚ್ಚುವ ಪ್ರಯೋಗಾಲಯ | | 500 |
| 7. | ಕ್ಲಾರಿಕ ಅಂಗಡಿ, ಕೇಶಾಲಂಕಾರ ಸಲೂನ್, ಸೌಂದರ್ಯವರ್ದಕ ಪಾರ್ಲರ್, ಮಾಲಿಶು ಪಾರ್ಲರ್<br>1. 200 ಚ.ಅಡಿಗಿಂತ ಹೆಚ್ಚು<br>2. 200 ಚ.ಅಡಿಗಿಂತ ಕಡಿಮೆ | 200 | 300<br>200 |
| 8. | ಬೀಡಿ ತಯಾರಿಕೆ ಮತ್ತು ಮಾರಾಟ | 250 | 500 |
| 9. | ಹತ್ತಿ ಎಣ್ಣೆ, ಸೆಣಬು, ಚಿಲ್ಲರೆ ಮಾರಾಟ | 500 | 500 |
| 10. | ರಾಸಯನಿಕಗಳು, ಕೀಟನಾಶಕಗಳು ಶೇಖರಣೆ, ಮಾರಾಟ | 250 | 500 |
| 12. | **ಡ್ರೈ ಕ್ಲಿನಿಂಗ್ ಮತ್ತು ಲಾಂಡ್ರಿ**<br>1. ಯಂತ್ರದಿಂದ<br>2. ಕೈಗಳಿಂದ | 50<br>100 | 500<br>250 |
| 13. | ಡೈಯಿಂಗ್ ಮತ್ತು ಪ್ರಿಂಟಿಂಗ್ ಘಟಕ | 250 | 500 |
| 14. | ಲ್ಯೂಬ್ರಿಕೇಟಿಂಗ್, ಆಯಿಲ್, ಗ್ರೀಸ್ ಆಯಿಲ್ ಕೂಲೆಂಟ್ ಶೇಖರಣೆ ಮತ್ತು ಮಾರಾಟ | | 500 |
| 15. | ಡ್ರಿಲ್ಲಿಂಗ್,ವೆಲ್ಡಿಂಗ್ ಮತ್ತು ಎಲೆಕ್ಟ್ರಿಕ್ ಪ್ಲೇಟಿಂಗ್ | 150 | 500 |
| | **ನಿರ್ಮಾಣ ಸಾಮಾಗ್ರಿ** | | |
| 1. | ಇಟ್ಟಿಗೆ ಮೇಲ್ಟಿಂಗ್ ಅಥವಾ ಸುಡುವುದು. | 1000 | 2000 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 2. | ಸಿಮೆಂಟ್ ಇಟ್ಟಿಗೆ ತಯಾರಿಕೆ | 1000 | 3000 |
| 3. | ಛಾವಣಿ ಟೈಲ್ ಹಾಗೂ ಶೀಟ್ ಗಳ ತಯಾರಿಕೆ | | 1000 |
| 4. | ಸುಣ್ಣ ಶೇಖರಣೆ | 100 | 250 |
| 5. | ಸಿಮೆಂಟ್ ಸಗಟು | | 1000 |
| 6. | ಸಿಮೆಂಟ್ ಚಲ್ಲರೆ | | 500 |
| 7. | **ಗ್ರಾನೈಟ್, ಮಾರ್ಬಲ್ಸ್, ಮತ್ತು ಕಡಪಾ ಕಲ್ಲುಗಳ ಸಂಸ್ಕರಣಾ, ಕತ್ತರಿಸುವ ಮತ್ತು ಶೇಖರಣಾ ಘಟಕ**<br>1. 1000 ಚ.ಅಡಿಗಿಂತ ಹೆಚ್ಚು<br>2. 1000 ಚ.ಅಡಿಗಿಂತ ಕಡಿಮೆ | 500 | 2000<br>1000 |
| 8. | ಪೈಂಟ್, ಲ್ಯಾಕರ್, ಹಾರ್ಡ್ ವೇರ್ ದಾಸ್ತಾನು | | 1000 |
| 9. | ಮರದ ದಿಮ್ಮಿ ಶೇಖರಣೆ ಮತ್ತು ಮಾರಾಟ<br>1. ದಿಮ್ಮಿಗಳು<br>2. ಕತ್ತರಿಸಿದ ಗಾತ್ರದ ಶೇಖರಣೆ ಮತ್ತು ಮಾರಾಟ<br>3. ಸರ್ವೆ ಮರ ಬಂಬೂ, ಬಿದಿರು | 1000 | 2000<br>1000<br>500 |
| 10. | ಚರ್ಮ ಹಾಗೂ ತೊಗಲಿನ ದಾಸ್ತಾನು | 250 | 500 |
| 11. | **ವಿದ್ಯುಚ್ಛಕ್ತಿ ಬಳಸಿ ಕೈಗಾರಿಕೆ (ವಾಣಿಜ್ಯ ಉದ್ದೇಶಗಳಿಗೆ ವಿದ್ಯುತ್ ಚಾಲಿತ ಯಂತ್ರೋಪಕರಣಗಳಿಗೆ ಪರವಾನಗಿ**<br>1. 1-5 ಎಚ್.ಪಿ.<br>2. 6-10 ಎಚ್.ಪಿ.<br>3. 10 ಕಿಂತ ಹೆಚ್ಚು ಪ್ರತಿ ಹೆಚ್ ಪಿಗೆ | 500<br>750<br>1000 | 500<br>1000<br>100 |
| 12. | ಫ್ಯಾನ್ಸಿ ಸ್ಟೋರ್ | | 250 |
| 13. | ಚಪ್ಪಲಿ ಅಂಗಡಿ | | 250 |
| 14. | ಗಿರವಿ ಅಂಗಡಿ | 500 | 1000 |
| 15. | ಬಟ್ಟೆ ಅಂಗಡಿ | | 1000 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 16. | ಟೈಲರ್ ಅಂಗಡಿ | | 300 |
| 17. | ಮೆಡಿಕಲ್ ಅಂಗಡಿ | 500 | 1000 |
| 18. | ಕ್ಲಿನಿಕ್ | | 1000 |
| 19. | ಫರ್ನಿಚರ್ ಅಂಗಡಿ | | 500 |
| 21. | ಎಸ್.ಟಿ.ಡಿ ಮತ್ತು ಐ.ಎಸ್.ಡಿ. | | 200 |
| 22. | ಎಸ್ಟೇಟ್ ಏಜನ್ಸೀಸ್ | | 500 |
| 23. | ಪ್ಲೈವುಡ್ ಅಂಗಡಿ | | 500 |
| 24. | ಫೋಟೋ ಫ್ರೇಂ ಅಂಗಡಿ | | 250 |
| 25. | ಗ್ಲಾಸ್ ವರ್ಕ್ಸ್ ಅಂಗಡಿ | 250 | 250 |
| 26. | ಗ್ಯಾಸ್ ಗೋಡನ್ | | 1000 |
| 27. | ಸ್ಟೀಲ್ ಪಾತ್ರೆ ಅಂಗಡಿ | | 250 |
| 28. | ಎಲೆಕ್ಟ್ರಿಕ್ ಅಂಗಡಿ | 250 | 250 |
| 29. | ಮಾಂಸಾಹಾರಿ ಹೋಟೆಲ್ | | 500 |
| 30. | ಶಾಮಿಯಾನ, ಮೈಕ್ ಸೆಟ್,<br>ಸೀರಿಯಲ್ ಸೆಟ್ ಅಂಗಡಿ | | 250 |
| 31. | ಸಿನಿಮಾ ಟೆಂಟ್ | | 1000 |
| 32. | ಸಿನಿಮಾ ಥಿಯೇಟರ್ | 1000 | 3000 |
| 33. | ಫೋಟೋ ಸ್ಟೂಡಿಯೊ | | |
| 34. | ಎನ್.ಒ.ಸಿ. | 200 | 250 |
| 35. | ಪೆಟ್ಟಿ ಅಂಗಡಿ | | 100 |
| 36. | ಹಿತ್ತಾಳೆ,ತಾಮ್ರ ಪಾತ್ರೆ ತಯಾರಿಕೆ<br>ಮತ್ತು ಮಾರಾಟ | 150 | 300 |
| 37. | ಚಿನ್ನ, ಬೆಳ್ಳಿ ಆಭರಣ ತಯಾರಿಕೆ<br>ಮತ್ತು ಮಾರಾಟ | 200 | 1000 |
| 38.. | ಎಲ್.ಪಿ.ಜಿ. ಗ್ಯಾಸ್ ಮಾರಾಟ. | | 2000 |
| 39.. | ಸೈಕಲ್ ಮಾರಾಟ ಮತ್ತು ದುರಸ್ತಿ | | 500 |
| 40. | ಹಾಲೋಬ್ರಿಕ್ ತಯಾರಿಕೆ ಮತ್ತು<br>ಮಾರಾಟವಿದ್ಯುತ್<br>ಕೈಯಿಂದ | | 1000<br>500 |
| 41. | ಸಿಮೆಂಟ್ ರಿಂಗ್ ತಯಾರಿಕೆ ಆಕೃತಿ,<br>ಕಂಬ | | 500 |
| 42. | ಕೈಮಗ್ಗ | | 250 |
| 43.. | ವಿದ್ಯುತ್ ಚಾಲಿತ ಮಗ್ಗ | | 500 |
| 44. | ರೆಡಿಮೆಡ್ ಬಟ್ಟೆ ಅಂಗಡಿ | | 500 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 45. | ಎಂಬ್ರಾಯಿಡ್/ಗುಂಡಿಗಳು ನೂಲು ದಾರಗಳ ಅಂಗಡಿ | | 250 |
| 46. | ಸಾಮಿಲ್ | | 1000 |
| 47. | 4 ಚಕ್ರ ವಾಹನ ಸರ್ವೀಸ್ ಸ್ಟೇಷನ್ | | 1000 |
| 48. | 2 ವೀಲರ್ ಸರ್ವೀಸ್ ಸ್ಟೇಷನ್ | 200 | 500 |
| 49. | ಗ್ರಾಹಕರ ಉಪಯೋಗ ವಸ್ತು ಮಾರಾಟ | | 500 |
| 50 | ಟಿ.ವಿ.ರೇಡಿಯೋ,ರೆಫ್ರಿಜರೇಟರ್ ರಿಪೇರಿ. | 150 | 250 |
| 51... | ಪ್ರಿಂಟಿಂಗ್ ಪ್ರೆಸ್<br>ಕೈಯಿಂದ<br>ಯಂತ್ರದಿಂದ | <br>100<br>200 | <br>250<br>500 |
| 52.. | ಸ್ಟೇಷನರಿ ಅಂಗಡಿ. | 200 | 500 |
| 53. | ಸ್ಕ್ರಾಫ್ ಡೀಲರ್ | | 250 |
| 54. | ಫೈನಾನ್ಸ್ ಕಮೀಷನ್ ಏಜೆಂಟ್ | | 1000 |
| 55. | ಸೈಬರ್ ಸೆಂಟರ್/ಕಂಪ್ಯೂಟರ್ | | 1000 |
| 56 | ಕನ್ನಡಕದ ಅಂಗಡಿ | | 250 |
| 57... | ವಾಚು ರಿಪೇರಿ ಅಂಗಡಿ | | 250 |
| 58. | ತರಕಾರಿ ಅಂಗಡಿ | | 250 |
| 59. | ಫ್ಲೋರ್ ಮಿಲ್ | 250 | 500 |
| 60. | ರೈಸ್ ಮಿಲ್.ಚ.ಅಡಿಗೆ | | 50 |
| 61.. | ಸಾರಾಯಿ ಅಂಗಡಿ | | 500 |
| 62.. | ಡಾಬಾ | | 1000 |
| 63. | ಆಟೋ ಗ್ಯಾರೇಜ್ | | 500 |
| 64. | ವೆಹಿಕಲ್ ಷೋರೂಂ | | 1000 |
| 65. | ಹುರಿ ಮಿಷನ್ | | 250 |
| 66 | ಮೇಣದ ಬತ್ತಿ, ಪೇಪರ್ ಕವರ್ ಮತ್ತು ಸಾಬೂನು, ವಗೈರೆ ತಯಾರಿಕೆ. | 250 | |
| 67.. | ಹಾಸಿಗೆ ದಿಂಬು ತಯಾರಿಸುವುದು. | 150 | 250 |
| 68. | ರೇಷ್ಮೆ ಗೂಡಿನಿಂದ ಜೂಟು ತೆಗೆಯುವುದು (ಕೈಚರಕ) | 200 | 250 |
| 69. | ರೇಷ್ಮೆ ದಾಸ್ತಾನು ಮಾಡುವುದು ಹಾಗು  ರೇಷ್ಮೆ ಅರಳಿ ಗೂಡು ದಾಸ್ತಾನು ಮಾಡುವುದು. | 500 | 500 |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 70. | ಕಬ್ಬಿಣದ ಕುಲುಮೆ ಕೆಲಸ (ಕೈಯಿಂದ) | 100 | 250 |
| 71.. | ಎಲೆಕ್ಟ್ರಿಕಲ್ ವರ್ಕ್ಸ್ ರಿವೈಂಡಿಂಗ್ ಎಲೆಕ್ಟ್ರಿಕಲ್ ಸಾಮಾಗ್ರಿ. | 150 | 500 |
| 72.. | ಆಟೋ ಮೊಬೈಲ್ ಸಾಮಾಗ್ರಿ ದಾಸ್ತಾನು ಮತ್ತು ರಿಪೇರಿ. | 250 | 500 |
| 73. | ಧಾನ್ಯ ಉರಿಯುವುದು ಯಂತ್ರದ ಸಹಾಯದಿಂದ | 500 | 750 |
| 74. | ಎಲ್ಲಾ ತರಹದ ವಸ್ತುಗಳನ್ನು ತಯಾರಿಸುವುದು. | 2500 | 3000 |
| 75. | ಡಾಂಬರು ಕೊಬ್ಬು ಡೈನಾಮೆಡ್, ಬಾಣ,ಬಿರುಸು,ಕೋವಿ ಮದ್ದು. | 250 | 5000 |
| 76. | ಪ್ಲಾಸ್ಟಿಕ್ ಇಂಡಸ್ಟ್ರೀಸ್ ಯಂತ್ರದಿಂದ ಎಲ್ಲಾ ತರಹದ ಸಾಮಾನುಗಳನ್ನು ಮಾಡುವುದು, ಕರಗಿಸುವುದು, ಮತ್ತು ದಾಸ್ತಾನು ಮಾಡುವುದು. | 1000 | 2000 |
| 77. | ಮರದ ಪೀಠೋಪಕರಣ ಅಥವಾ ಇತರೆ ವಸ್ತುಗಳನ್ನು ದಾಸ್ತಾನು ಮಾಡುವುದು. | 200 | 250 |
| 78. | ದಾಸ್ತಾನು ಮಳಿಗೆ 500 ಅಡಿ<br>500 ಅಡಿಗಿಂತ ಹೆಚ್ಚಿನದು<br>500 ಅಡಿಗಿಂತ ಕಡಿಮೆ | | 500<br>1000 |
| 79. | **ಜಾಹಿರಾತು.** | | |
| | ಎ. ತಾತ್ಕಾಲಿಕ (1 ತಿಂಗಳಿಗೆ) ಚ.ಅಡಿ | 10 | 20 |
| | ಬಿ. ಖಾಯಂ (1 ವರ್ಷಕ್ಕೆ) ಚ.ಅಡಿ | 100 | 200 |
| | ಸಿ. ಮನೋರಂಜನೆ (1 ವರ್ಷಕ್ಕೆ) ಚ.ಅಡಿ | | 2000 |
| | ಡಿ. ಹೊರಾಂಗಣ ಪ್ರದರ್ಶನ ತಾತ್ಕಾಲಿಕ ( 1ತಿಂಗಳಿಗೆ) | | 2000 |
| | ಇ) ಒಳಾಂಗಣ ಪ್ರದರ್ಶನ ತಾತ್ಕಾಲಿಕ | | 1000 |
| | ಎಫ್) ಸರ್ಕಸ್ ಪ್ರದರ್ಶನ | | 1000 |

ವಿಷಯ 39- ವಾರ್ಡ್ ನಂ. 27ರ ವಿವೇಕಾನಂದನಗರದಲ್ಲಿ ಕೆಂಗಲ್ ಹನುಮಂತಯ್ಯ ಸ್ಪೋರ್ಟ್ಸ್ ಕ್ಲಬ್ ಗೆ ವುಡನ್
PDF Created with deskPDF PDF Writer - Trial :: http://www.docudesk.com
ಫ್ಲೋರಿಂಗ್ ಅಳವಡಿಸುವ ಕಾಮಗಾರಿಯನ್ನು ಎಸ್.ಎಫ್ ಸಿ (ಮುಕ್ತನಿಧಿ) ಮತ್ತು ಅನುದಾನದಲ್ಲಿ

ತೆಗೆದುಕೊಂಡಿದ್ದು, ಪರಿಷ್ಕೃತ ಅಂದಾಜನ್ನು ಅನುಮೋದಿಸುವ ವಿಚಾರ. ಹಾಗೂ ಹೆಚ್ಚುವರಿ ಹಣವನ್ನು, ಅನುದಾನದ ಮೇಲೆ ಬಂದಿರುವ ಬಡ್ಡಿ ಹಾಗೂ ಉಳಿತಾಯದ ಹಣದಿಂದ ಭರಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 39- ವಿಷಯವನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಬಿ ಉಮೇಶ್ ಮತ್ತು ಸೋಮಶೇಖರ್ ರಾವ್ ಮಾತನಾಡಿ ಸದರಿ ಕಾಮಗಾರಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಒಳ್ಳೆಯ ಉಪಯೋಗವಾಗುತ್ತದೆಂದು ತಿಳಿಸಿದರು. ನಂತರ ಸದರಿ ಕಾಮಗಾರಿಗೆ ವೆಚ್ಚವಾಗಿರುವ ಪರಿಷ್ಕರಣೆ ಅಂದಾಜು ಮೊತ್ತವನ್ನು ನಿರ್ಮಿತ ಕೇಂದ್ರ ನಿರ್ಮಾಣ ಮಾಡಿರುವುದರಿಂದ ಹೆಚ್ಚುವರಿ ಮೊಬಲಗು ರೂ.85640-00 ಗಳನ್ನು ಈಗಾಗಲೇ ಬಿಡುಗಡೆಯಾಗಿರುವ ಉಳಿತಾಯ ಹಣದಿಂದ ಭರಿಸುವಂತೆ ಸಭೆಯು ತೀರ್ಮಾನಿಸಿತು.

ವಿಷಯ 40- ಮಾನ್ಯ ಜಿಲ್ಲಾಧಿಕಾರಿಗಳ ಅರೆ ಸರ್ಕಾರಿ ಪತ್ರದ ಸಂ. ಎಂಯುಎನ್(1)-ಸಿಆರ್-29-2007-08, ದಿ. 20.07.2007ರ ಸೂಚನೆಯಂತೆ ಸ್ಕ್ಯಾವೆಂಜರ್ ಗಳು ಮಲ ಹೊರುವ ಪದ್ಧತಿಯನ್ನು ತಪ್ಪಿಸುವ ಸಲುವಾಗಿ ಈ ನಗರದಲ್ಲಿ ಪತ್ತೆಯಾಗಿರುವ 5 ಕುಟುಂಬಗಳ ಒಣ ಕಕ್ಕಸ್ಸು ನಿರ್ಮೂಲನೆ ಮಾಡಿ ಶೌಚಾಲಯ ಮಾಡಿಕೊಡಲು ಸೂಚಿಸಿರುವ ಮೇರೆಗೆ ನಾಲ್ಕು ಶೌಚಾಲಯಗಳನ್ನು ನಿರ್ಮಿಸಿ ಕೊಟ್ಟಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 40- ವಿಷಯದ ಬಗ್ಗೆ ಸಭೆಗೆ ವಿವರಿಸಲಾಯಿತು. ಈ ಸಂಬಂಧ ಪೌರಾಡಳಿತ ನಿರ್ದೇಶನಾಲಯದ ಸೂಚನೆಗಳನ್ನು ಅನುಸರಿಸಿ ನಾಲ್ಕು ಶೌಚಾಲಯಗಳನ್ನು ರೂ. 46766-00 ಗಳಲ್ಲಿ ನಿರ್ಮಿಸಿಕೊಟ್ಟಿರುವುದನ್ನು ಸಭೆಯು ಒಪ್ಪಿ ಅನುಸಮರ್ಥನಗೊಳಿಸಲಾಯಿತು.

ವಿಷಯ 41- ನಗರಸಭೆ ಕಛೇರಿ ಸಂಕೀರ್ಣ ಕಟ್ಟಡದ ಆಡಳಿತಾತ್ಮಕ ಮಂಜೂರಾತಿಯು ಸರ್ಕಾರಿ ಆದೇಶ ಸಂಖ್ಯೆ ನಅಇ-02-ಟಿಎಂಸಿ-2008-ಬೆಂ, ದಿ. 28.05.2008 ರಂತೆ ಅಂದಾಜು ಮೊತ್ತವನ್ನು ರೂ. 2.75 ಕೋಟಿಗಳಿಗೆ ಮಿತಿಗೊಳಿಸಿದ್ದು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರಿಗೆ ಈ ಕುರಿತು ಪತ್ರ ಬರೆದು ಕೋರುವ ವಿಚಾರ.

ತೀರ್ಮಾನ 41- ಸರ್ಕಾರದ ಆದೇಶ ಸಂಖ್ಯೆ ನಅಇ/02/ಟಿಎಂಸಿ/2008-ಬೆಂ, ದಿ. 28.05.2008 ರಂತೆ ಪತ್ರವನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು. ಆದೇಶದಲ್ಲಿ ತಿಳಿಸಿರುವಂತೆ ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರು ನಗರಸಭಾ ಕಛೇರಿ ಸಂಕೀರ್ಣ ನಿರ್ಮಾಣ ಮಾಡಲು ಈಗಾಗಲೇ 3 ಕೋಟಿ ರೂ.ಗಳಿಗೆ ಟೆಂಡರ್ ಕರೆದಿದ್ದು, ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆಯಲು ನಗರಸಭೆಯವರು ದಿ.05.09.2007 ರಂದು ಪತ್ರ ಬರೆಯಲಾಗಿದ್ದು, ನಂತರ ಪೌರಾಡಳಿತ ನಿರ್ದೇಶಕರು ತಮ್ಮ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಮಾನ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆಯವರಿಗೆ ಕೋರಿ ಪತ್ರ ಬರೆದಿರುವುದನ್ನು ಸಭೆಯಲ್ಲಿ ವಿವರಿಸಲಾಯಿತು. ಪೌರಾಯುಕ್ತರು ಹಾಗೂ ಪೌರಾಡಳಿತ ನಿರ್ದೇಶಕರ ಕೋರಿಕೆಯನ್ನು ಪರಿಗಣಿಸಿ ಸರ್ಕಾರಿ ಆದೇಶ ಸಂಖ್ಯೆ ನಅಇ/02/ಟಿಎಂಸಿ/2008-ಬೆಂ, ದಿ. 28.05.2008 ರಲ್ಲಿ

PDF Created with deskPDF PDF Writer - Trial :: http://www.docudesk.com

ಮುಖ್ಯ ಅಭಿಯಂತರರು ಲೋಕೋಪಯೋಗಿ ಇಲಾಖೆ ತಾಂತ್ರಿಕ ಮಂಜೂರಾತಿ ನೀಡಿರುವ ರೂ. 3 ಕೋಟಿಗಳ ಅಂದಾಜು ಪಟ್ಟಿಯನ್ನು ಮಿತಿಗೊಳಿಸಿ ರೂ. 2.75 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುವುದನ್ನು ಸಭೆಯಲ್ಲಿ ವಿವರಿಸಲಾಯಿತು. ನಂತರ ಈ ಬಗ್ಗೆ ಲೋಕೋಪಯೋಗಿ ಇಲಾಖೆ ರಾಮನಗರ ಶಾಖೆಯ ಕಾರ್ಯಪಾಲಕ ಅಭಿಯಂತರಿಗೆ ಪತ್ರ ಬರೆದು ಸರ್ಕಾರಿ ಆದೇಶದಂತೆ ಕಛೇರಿ ಸಂಕೀರ್ಣ ಕಟ್ಟಡವನ್ನ ರೂ. 2.75 ಕೋಟಿಗಳಿಗೆ ಮಿತಿಗೊಳಿಸಿ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಹಾಗೂ ಸರ್ಕಾರಿ ಆದೇಶದಂತೆ ರೂ. 2.75 ಕೋಟಿ ರೂ.ಗಳಲ್ಲಿ ಗುತ್ತಿಗೆದಾರರಿಗೆ ನೀಡಬೇಕಾದ ಟೆಂಡರ್ ಪ್ರೀಮಿಯಂ ಮತ್ತು ಪತ್ರ ಬರೆಯುವ ಬಗ್ಗೆ ಕನ್ಸಲ್ ಟೆನ್ಸಿ ರವರಿಗೆ ನೀಡಬಹುದಾದ ಮೊಬಲಗನ್ನು ಸಹ ನಗರಸಭೆಯ ಆರ್ಥಿಕ ದೃಷ್ಟಿಯಿಂದ 2.75 ಕೋಟಿ ರೂ.ಗಳಿಗೆ ಮಿತಿಗೊಳಿಸಿ ಪೂರ್ಣಗೊಳಿಸಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಈ ಬಗ್ಗೆ ಕಟ್ಟಡದಲ್ಲಿ ಕೆಲವಾರು ಮಾರ್ಪಾಡುಗಳನ್ನು ರೂ. 2.75 ಕೋಟಿಗಳಿಗೆ ಮಿತಿಗೊಳಿಸಲು ಕೈಗೊಳ್ಳಬೇಕಾಗಿರುವ ಕೆಲಸವನ್ನು ಮಾನ್ಯ ಅಧ್ಯಕ್ಷರು, ಪೌರಾಯುಕ್ತರು, ತಾಂತ್ರಿಕ ಸಿಬ್ಬಂದಿಯವರೊಡನೆ ಹಾಗೂ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರವರೊಡನೆ ಚರ್ಚಿಸಿ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ವಿಷಯ 42- ರಾಮನಗರ ನಗರಸಭೆಯ ವಾರ್ಡ್ ನಂ. 1ರ ಉತ್ತರ ಬಡಾವಣೆಯ ತೆಂಗಿನ ತೋಪು ಹಾಗೂ ವಾರ್ಡ್ ನಂ. 2 ರಲ್ಲಿ ವಿನಾಯಕನಗರದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರ ಪತ್ರದ ದಿ. 11.04.2008 ರಂತೆ ಅಗತ್ಯ ಪೈಪ್ ಲೈನ್ ಕಾಮಗಾರಿಗಳಿಗೆ ರೂ. 4.60 ಲಕ್ಷಗಳನ್ನು ಠೇವಣಿ ನೀಡಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 42- ಸಾರ್ವಜನಿಕ ಹಿತದೃಷ್ಟಿಯಿಂದ ವಾರ್ಡ್ ನಂ. 2 ರ ವಿನಾಯಕನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಪೈಪ್ ಲೈನ್ ಕಾಮಗಾರಿಗೆ ರೂ. 4.60 ಲಕ್ಷಗಳನ್ನು ಕೆಯುಡಬ್ಲ್ಯೂಎಸ್ ಅಂಡ್ ಡಿಬಿ ಮಂಡಳಿಗೆ ಠೇವಣಿ ಇಟ್ಟಿರುವುದನ್ನು ಸಭೆಯು ಒಪ್ಪಿ ಅನುಸಮರ್ಥನಗೊಳಿಸಲಾಯಿತು.

ವಿಷಯ 43- ಕರ್ನಾಟಕ ನಗರನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚನ್ನಪಟ್ಟಣ ದಿ. 07.03.2008 ರಂದು ಈ ಕಛೇರಿಗೆ ಪತ್ರ ಬರೆದು ಗೌಸಿಯಾನಗರದಲ್ಲಿ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು ನಿರ್ವಹಿಸಲು ರೂ. 1,20,000-00 ಹಾಗೂ ವಾರ್ಡ್ ನಂ. 30 ರ ನಾಗನಕಟ್ಟೆ ಪ್ರದೇಶದಲ್ಲಿ ಕೆಟ್ಟಿರುವ ಬೋರ್ ವೆಲ್ ನ್ನು ಸುಸ್ಥಿತಿಯಲ್ಲಿಡಲು ರೂ. 1,55,000-00 ಗಳನ್ನು ಠೇವಣಿ ಮಾಡಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 43- ಸಾರ್ವಜನಿಕ ಹಿತದೃಷ್ಟಿಯಿಂದ ಗೌಸಿಯಾ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಪೈಪ್ ಲೈನ್ ಕಾಮಗಾರಿಗೆ ರೂ. 1.20 ಲಕ್ಷಗಳನ್ನು ಮತ್ತು ವಾರ್ಡ್ 30 ನಾಗನಕಟ್ಟೆ ಪ್ರದೇಶದಲ್ಲಿ ಕೆಟ್ಟಿರುವ ಬೋರ್ ವೆಲ್ ಗಳನ್ನು ಸುಸ್ಥಿತಿಯಲ್ಲಿಡಲು ರೂ. 1.55

PDF Created with deskPDF PDF Writer - Trial :: http://www.docudesk.com

ಲಕ್ಷಗಳನ್ನು  ಕೆಯುಡಬ್ಲ್ಯೂ ಎಸ್ ಅಂಡ್ ಡಿಬಿ ಮಂಡಳಿಗೆ ಠೇವಣಿ ಇಟ್ಟಿರುವುದನ್ನು ಸಭೆಯು ಒಪ್ಪಿ ಅನುಸಮರ್ಥನಗೊಳಿಸಲಾಯಿತು.

ವಿಷಯ 44- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರ ಪತ್ರ ದಿ. 31.03.2008 ರಂತೆ ದಿ. 25.10.2005 ರಿಂದ 31.03.2008 ರವರೆಗೆ ನಗರಸಭಾ ವ್ಯಾಪ್ತಿಯಲ್ಲಿನ ಒಳಚರಂಡಿ ನಿರ್ವಹಣೆ ವ್ಯವಸ್ಥೆಗಾಗಿ ರೂ. 26.60 ಗಳನ್ನು ಪಾವತಿಸಬೇಕಾಗಿದ್ದು, ಸಭೆ ಮಂಜೂರಾತಿ ನಿರೀಕ್ಷಣೆ ಮೇರೆಗೆ ರೂ. 10.00 ಲಕ್ಷಗಳನ್ನು ಪಾವತಿಸಿದ್ದು, ಉಳಿಕೆ ಹಣ ರೂ. 16.60 ಲಕ್ಷಗಳು  ಪಾವತಿಸುವ ವಿಚಾರ.

ತೀರ್ಮಾನ 44- ಸಭೆಯಲ್ಲಿ ವಿಷಯವನ್ನು ಓದಿ ತಿಳಿಸಲಾಯಿತು.  ಹಾಗೂ ರೂ. 10.00 ಲಕ್ಷ ಪಾವತಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.  ಬಾಕಿ ಹಣವನ್ನು ನಗರಸಭೆ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಪಾವತಿಸಲು ಸಭೆಯು  ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 45- ಶ್ರೀ ರವಿ ನಗರಸಭಾ ಸದಸ್ಯರು ಮನವಿ ಸಲ್ಲಿಸಿ ಸಾರ್ವಜನಿಕ ಹಿತದೃಷ್ಟಿಯಿಂದ 17ನೇ ವಾರ್ಡಿನ ಬಾಲಗೇರಿಯ ಮಕ್ಕಾನ್ ಪಕ್ಕದ ರಸ್ತೆಯಿಂದ ಅರ್ಕಾವತಿ ನದಿವರೆವಿಗೂ ಹಾಗೂ ತಿಗಳರ ಸಂಘದ ಕಛೇರಿಯಿಂದ ಪಾಪಣ್ಣನ ಮನೆವರೆಗೆ ಇರುವ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೋರಿರುವ ಮೇರೆಗೆ ಅಭಿವೃದ್ಧಿಪಡಿಸಿರುವುದನ್ನು ಅನುಸಮರ್ಥನಗೊಳಿಸಿರುವ ವಿಚಾರ.

ತೀರ್ಮಾನ 45-  ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಂಡಿರುವ ಕಾಮಗಾರಿಯನ್ನು ರೂ. 20,340-00 ಗಳಲ್ಲಿ ನಿರ್ವಹಿಸುವುದನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಸಮರ್ಥನಗೊಳಿಸಲಾಯಿತು.

ವಿಷಯ 46- ಮಾನ್ಯ ಸದಸ್ಯರಾದ ಶ್ರೀ ಎ ರವಿರವರು ಮನವಿ ಸಲ್ಲಿಸಿ ನಗರಸಭಾ ವಾರ್ಡ್ ನಂ. 17ರ ಬಾಲಗೇರಿ ಪ್ರದೇಶದಲ್ಲಿ ಪ.ಜಾ/ ಪ.ಪಂಗಡ ಹಾಗೂ ಹಿಂದುಳಿದ ವರ್ಗದವರು ಹೆಚ್ಚಿಗೆ ವಾಸಿಸುತ್ತಿದ್ದು, ಹಾಗೂ ಸದರಿ ಬಡಾವಣೆ ಅಭಿವೃದ್ಧಿ ಹೊಂದದೆ ಇರುವುದರಿಂದ ಕೊಳಚೆ ಪ್ರದೇಶವೆಂದು ಘೋಷಿಸಲು ಕೋರಿರುವ ವಿಚಾರ.

ತೀರ್ಮಾನ 46- ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿತು.  ನಗರಸಭೆಗೆ ಸೇರಿದ ವಾರ್ಡ್ ನಂ. 17 ರ ಬಾಲಗೇರಿ ವ್ಯಾಪ್ತಿಯಲ್ಲಿ ಶೇ. 80 ರಷ್ಟು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಜನಾಂಗದವರು ವಾಸಿಸುತ್ತಿದ್ದು, ಕೊಳಚೆ ಪ್ರದೇಶವೆಂದು ಘೋಸಿಸುವುದು ಸೂಕ್ತವೆಂದು, ಪ್ರಸ್ತಾವನೆಯನ್ನು ಕೊಳಚೆ ನಿರ್ಮಾಲನ ಮಂಡಳಿಗೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 47- ಮಾನ್ಯ ಸದಸ್ಯರಾದ ಶ್ರೀಮತಿ ಫರಹತ್ತುನ್ನೀಸಾ ರವರು ಮನವಿ ಸಲ್ಲಿಸಿ ವಾರ್ಡ್ ನಂ. 18ರ ಫೂಲ್ ಬಾಗ್ ಬಡಾವಣೆಯಲ್ಲಿರುವ ಮಟನ್ ಮಾರ್ಕೆಟ್ ನ್ನು ಕೆಡವಿ ಸಮುದಾಯ ಭವನ ನಿರ್ಮಿಸಲು ಕೋರಿರುವ ವಿಚಾರ.

ತೀರ್ಮಾನ 47- ಸದಸ್ಯರಾದ ಶ್ರೀ ಮುಕುಂದರಾಜ್ ಮಾತನಾಡಿ ಬೇರೆ ಕಡೆ ಮಟನ್ ಮಾರ್ಕೆಟ್ ಗೆ ಸ್ಥಳಾವಕಾಶ [illegible] ನಗರದ

PDF Created with deskPDF PDF Writer - Trial :: http://www.docudesk.com

ನಾಲ್ಕು ಕಡೆಗಳಲ್ಲಿ ಮಟನ್ ಮಾರ್ಕೆಟ್ ತೆರೆದು ವ್ಯವಸ್ಥೆಗೊಳಿಸುವುದು ಸೂಕ್ತವೆಂದು ತಿಳಿಸಿ ಸದ್ಯಕ್ಕೆ ಬೇರೆ ವ್ಯವಸ್ಥೆ ಆಗುವವರೆಗೆ ಯಾವುದೇ ಕ್ರಮ ಜರುಗಿಸುವುದು ಸೂಕ್ತವಿಲ್ಲವೆಂದು ತಿಳಿಸಿದರು. (ದಿ. 24.09.2005 ರ ಸಭೆಯ ಠರಾವು 45 ರಲ್ಲಿ ಶಿಥಿಲವಾಗಿರುವ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಿಸಲು ತೀರ್ಮಾನ ಕೈಗೊಂಡಿರುತ್ತದೆ)

ವಿಷಯ 48- ನಗರಸಭೆ ನಿವೇಶನಗಳನ್ನು ಗುರುತಿಸಿ ಬಹಿರಂಗ ಹರಾಜು ಮಾಡುವ ವಿಚಾರ.

ತೀರ್ಮಾನ 48- ವಿಷಯವನ್ನು ಚರ್ಚಿಸಿ ಈ ಕೆಳಕಂಡ ನಿವೇಶನಗಳನ್ನು ಗುರ್ತಿಸಿದ್ದು ನಿಯಾಮಾನುಸಾರ ಬಹಿರಂಗ ಹರಾಜು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

1. ಮೇದರಬೀದಿ ಖಾತಾ ನಂ. 52/213/164 ಅಳತೆ 60x30 ಅಡಿಗಳ ನಗರಸಭಾ ನಿವೇಶನ.
2. ನಗರಸಭಾ ಬಡಾವಣೆ ಖಾತಾನಂ. 404/2 ಅಳತೆ 12.0+6.00/2x38 ಮೀ. ನಗರಸಭಾ ಸ್ವತ್ತು.
3. ಅರ್ಚಕರಹಳ್ಳಿ ಖಾತಾ ನಂ. 920A ಅಳತೆ 55x72 ಅಡಿಗಳ ನಗರಸಭಾ ನಿವೇಶನ
4. ಅರ್ಚಕರಹಳ್ಳಿ ಖಾತಾನಂ. 902A ಅಳತೆ 60x43 ಅಡಿಗಳ ನಗರಸಭಾ ನಿವೇಶನ

ವಿಷಯ 49- ವಾರ್ಡ್ ನಂ. 27 ರಲ್ಲಿ ಕೆಂಪೇಗೌಡ ವೃತ್ತದ ಬಳಿ ಬರುವ ಮಾಗಡಿ ರಸ್ತೆಯ ಪೂರ್ವಕ್ಕೆ ಸೇರಿದ 4 ಅಡ್ಡರಸ್ತೆಗಳುಳ್ಳ ಲೇಔಟ್ ನ ನಿವಾಸಿಗಳು ಸದರಿ ಲೇಔಟ್ ಗೆ ಕೆಂಪೇಗೌಡನಗರ ಎಂಬ ಹೆಸರಿಡುವಂತೆ ಕೋರಿ ಅರ್ಜಿ ಸಲ್ಲಿಸಿರುವುದನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 49- ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು. ರಾಮನಗರ ನಗರಸಭಾ ವ್ಯಾಪ್ತಿಯಲ್ಲಿನ ಕೆಂಪೇಗೌಡ ವೃತ್ತದ ಬಳಿ ಮಾಗಡಿ ರಸ್ತೆಯ ಪೂರ್ವಕ್ಕೆ ಬರುವ ಬಡಾವಣೆಗೆ ಕೆಂಪೇಗೌಡ ನಗರ ಎಂದು ಹೆಸರಿಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಹಾಗೂ ಈ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಮುಂದಿನ ಕ್ರಮ ವಹಿಸಲು ಸಭೆಯು ತೀರ್ಮಾನಿಸಿತು.

ವಿಷಯ 50- ಈ ಕಛೇರಿಯ ಟೆಂಡರ್ ಕಂ ಕೋಟೇಶನ್ ಪ್ರಕಟಣೆ ಸಂ. ನಸರಾ-ತಾವಿ-ಸ.ಅ-26-2007-08 ದಿ. 28.01.2006 ರಂತೆ ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಬಡಾವಣೆಗಳಲ್ಲಿ ಬರುವ ಕಟ್ಟಡಗಳಿಗೆ ಆಸ್ತಿ ಸಂಖ್ಯೆಯನ್ನು ಸೂಚಿಸುವ ನಾಮಫಲಕ ಅಳವಡಿಸಲು ಬಂದಿರುವ ಕೋಟೇಶನ್ ಗಳಲ್ಲಿ ಕಡಿಮೆ ದರ ಸಲ್ಲಿಸಿರುವ ಎಸ್.ಎ ಅಜೀಂ, ಮಾಗಡಿ ರವರ ಕೋಟೇಶನ್ ನ್ನು ಅನುಮೋದಿಸುವ ವಿಚಾರ.

ತೀರ್ಮಾನ 50- ಬಂದಿರುವ ಟೆಂಡರ್ ಗಳನ್ನು ಪರಿಶೀಲಿಸಲಾಯಿತು. ಕಡಿಮೆ ದರ ನಮೂದಿಸಿರುವ ಕೋಟೇಶನ್ ದಾರರಾದ ಶ್ರೀ ಎಸ್.ಎ ಅಜೀಂ, ಮಾಗಡಿ ರವರ ಕೋಟೇಶನ್ ನ್ನು ಅನುಮೋದಿಸಲಾಯಿತು.

ವಿಷಯ 51- ರಾಮನಗರ ನಗರಸಭೆ ವ್ಯಾಪ್ತಿಯ ಮೈಸೂರು-ಬೆಂಗಳೂರು ಹೆದ್ದಾರಿಯ ರಸ್ತೆಯಲ್ಲಿರುವ ಜೋಡಿ ದೀಪಗಳ ವಿದ್ಯುತ್ ಕಂಬಗಳಿಗೆ ಜಾಹಿರಾತು ಫಲಕ ಅಳವಡಿಸಲು ಸಭೆ ಮಂಜೂರಾತಿ ನಿರೀಕ್ಷಣೆ ಮೇರೆಗೆ ನೀಡಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 51- ವಿಷಯದ ಬಗ್ಗೆ ಸಭೆಯು ಚರ್ಚಿಸಿತು. ವಾರ್ಷಿಕ ರೂ. 75000-00 ಗಳಂತೆ 5 ವರ್ಷಗಳ ಅವಧಿಗೆ ರೂ. 3.75 ಲಕ್ಷಗಳಿಗೆ ಜಾಹಿರಾತು ಫಲಕ ಅಳವಡಿಸಲು ಅನುಮತಿ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಅನುಸಮರ್ಥನಗೊಳಿಸಲಾಯಿತು.

ವಿಷಯ 52- ನಗರಸಭೆ ಖಾತೆ ಸಂ. 89/931/745 ಮತ್ತು 90/1026/828 ಎಂ.ಜಿ. ರಸ್ತೆಯಲ್ಲಿರುವ ನಗರಸಭೆಯ ಹಳೇ ಆಕ್ರಾಯಿ ಕಛೇರಿ ಹಾಗೂ ಹಿಂಭಾಗದಲ್ಲಿರುವ (ಮಳಿಗೆಗಳಲ್ಲಿ ಬಾಡಿಗೆದಾರರನ್ನು ಖಾಲಿ ಮಾಡಿಸಬೇಕಾಗಿರುತ್ತದೆ) ಮಳಿಗೆಗಳು ಶಿಥಿಲವಾಗಿದ್ದು, ಅವುಗಳನ್ನು ನೆಲಸಮ ಮಾಡಿ ಹೊಸದಾಗಿ ವಾಣಿಜ್ಯ ಕಟ್ಟಡ ಕಟ್ಟಲು ಅನುಮೋದಿಸುವ ವಿಚಾರ.

ತೀರ್ಮಾನ 52- ವಿಷಯವನ್ನು ಸಭೆಗೆ ಮಂಡಿಸಲಾಯಿತು. ನಗರಸಭೆಯ ಆರ್ಥಿಕ ದೃಷ್ಟಿಯಿಂದ ಹಾಲೀ ಇರುವ ಸುಮಾರು 75 ವರ್ಷಗಳು ಹಳೇಯದಾಗಿರುವ ಹಾಗೂ ಶಿಥಿಲವಾಗಿರುವ ನಗರಸಭೆಯ ಅಕ್ರಾಯಿ ಕಛೇರಿಯ ಕೆಡವಿ ಹಾಕಿ ಹೊಸದಾಗಿ ಶಾಂಪಿಂಗ್ ಕಾಂಪ್ಲೆಕ್ಸ್ ಕಟ್ಟಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಹಾಗೂ ಕಟ್ಟಡವನ್ನು ಕೆಡವಿ ಹಾಕುಲು ನಿಯಾಮಾನುಸಾರ ಕ್ರಮ ಕೈಗೊಳ್ಳುವಂತೆ ಸಭೆಯು ತೀರ್ಮಾನಿಸಿತು.

ವಿಷಯ 53- ನಗರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಿರುವ ಕಾಮಗಾರಿಗಳನ್ನು ಮಾನ್ಯ ಸದಸ್ಯರುಗಳ ಕೋರಿಕೆ ಮೇರೆಗೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ 53- ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು. ಸಾರ್ವಜನಿಕ ಹಿತದೃಷ್ಟಿಯಿಂದ ಮಾನ್ಯ ಸದಸ್ಯರುಗಳು ನೀಡಿರುವ ಅರ್ಜಿಯ ವಿವರಗಳನ್ನು ಸಭೆಯಲ್ಲಿ ಓದಲಾಯಿತು. 2008-09ನೇ ಸಾಲಿಗೆ ಬಿಡುಗಡೆಯಾಗಲಿರುವ ಮುಕ್ತನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸಭೆಯು ತೀರ್ಮಾನಿಸಿತು.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ .ಲಕ್ಷಗಳಲ್ಲಿ |
|---|---|---|
| 1 | ವಾರ್ಡ್ ನಂ 17:ರ ಬಾಲಗೇರಿ ಪಾಂಡು ಮನೆಯಿಂದ ಪ್ರಹ್ಲಾದ ಮನೆವರೆಗೆ ಹಾಗು ಅಂಗಡಿ ಪಾಂಡುರಂಗ ಮನೆಯಿಂದ ಎಂ .ನಾಗರಾಜು ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗು ದೋಬಿ ಫಯಾಜ್ ಮನೆಯಿಂದ ಲೇ : ಅಚ್ಯುತ್ ರಾವ್ ಭಜನೆ ಮಂದಿರದವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ | 8.50 |
| 2 | .ವಾರ್ಡ್ ನಂ. 26 ರ ಐಜೂರು ಗುಡ್ಡೆ ಶಿವಣ್ಣನ ಮನೆಯ ಪಕ್ಕದ ಗಲ್ಲಿ, ದರ್ಗಾ ಪಕ್ಕದ ಗಲ್ಲಿ ಹಾಗು ದೊಡ್ಡ ಮೋರಿ ಪಕ್ಕದಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಾಣ | 3.00 |
| 3 | ವಾರ್ಡ್ ನಂ 24 :ರ ಯಾರಬ್ ನಗರ 1ನೇ ಬ್ಲಾಕಿನ ಪೈಬು ಹರಿಮಿಷನ್ ನಿಂದ ಎಜಾಜ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ.. | 6.25 |
| 4 | ವಾರ್ಡ್ ನಂ 23 :ರ ಟಿಪ್ಪುನಗರ ಮುನೀರ್ ಮನೆಯಿಂದ ಮಸೀದಿವರೆಗೆ ಚರಂಡಿ ಕಾಮಗಾರಿ | 3.25 |

PDF Created with deskPDF PDF Writer - Trial :: http://www.docudesk.com

| | | |
|---|---|---|
| 5 | ವಾರ್ಡ್ ನಂ 18:ರ ಫೂಲ್ ಬಾಗ್ ರಾಯಲ್ ಶಾಲೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ | 0.57 |
| 6 | ವಾರ್ಡ್ ನಂ25:ರ ಚನ್ನೇನಹಳ್ಳಿಯಲ್ಲಿ ಹಾಗು ಮಂಜುನಾಥ ಛತ್ರದ ಮುಂಭಾಗ ಚರಂಡಿ ನಿರ್ಮಾಣ ಕಾಮಗಾರಿ | 6.00 |
| 7 | ವಾರ್ಡ್ ನಂ30 :ರ ಮಲ್ಲೇಶ್ವರ ಬಡಾವಣೆಯಲ್ಲಿ ಚರಂಡಿ ನಿರ್ಮಾಣ )ಚಂದ್ರಶೇಖರ್ ಮನೆ ಹತ್ತಿರ (ಹಾಗು ಜಯರಾಮಯ್ಯ ಮನೆ ಹತ್ತಿರ ಮತ್ತು ಪುಟ್ಟಸ್ವಾಮಿ ಮನೆ ಎದುರು ಡೆಕ್ ಸ್ಲಾಬ್ ನಿರ್ಮಾಣ. | 1.60 |
| 8 | ವಾರ್ಡ್ ನಂ 31:ರ ರಂಗರಾಯರದೊಡ್ಡಿಯ ತೋಟದ ಕೃಷ್ಣಪ್ಪ ಮನೆಯ ಹತ್ತಿರ ನೀರು ಸರಬರಾಜು ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ . | -0.40 |
| 9 | ವಾರ್ಡ್ ನಂ25 .ರ ಬಿಳಗುಂಬ ರಸ್ತೆಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿ | 2.20 |
| 10 | ವಾರ್ಡ್ ನಂ. 30 ರ ಮಲ್ಲೇಶ್ವರ ಬಡಾವಣೆಯ ಕಾಳೇಗೌಡರ ಮನೆಯಿಂದ ಮರಿಚಿಕ್ಕೇಗೌಡರ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಗೂರು ಮೂರ್ತಿ ಮನೆ ಹತ್ತಿರ ಚರಂಡಿ ನಿರ್ಮಾಣ | 4.95 |

| | | |
|---|---|---|
| 11 | ನಗರಸಭಾ ಅಧ್ಯಕ್ಷರ ಕೊಠಡಿಯನ್ನು ನವೀಕರಿಸುವುದು | 1.00 |
| 12 | ವಾರ್ಡ್ ನಂ. 16ರ ಬಾಲಗೇರಿ ಆಶ್ರಯ ಬಡಾವಣೆ 5 ಅಡ್ಡರಸ್ತೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ | 4.50 |
| 13 | ವಾರ್ಡ್ ನಂ. 22ರ ರೆಹಮಾನಿಯಾ ನಗರದ ರೆಹಮಾನಿಯ ನರ್ಸರಿ ಸ್ಕೂಲ್ ಹತ್ತಿರ ಚರಂಡಿ ನಿರ್ಮಾಣ ಮತ್ತು ಪೈಪ್ ಲೈನ್ | 3.75 |
| 14 | ವಾರ್ಡ್ ನಂ. 14ರ ನಾಲ್ ಬಂದ್ ವಾಡಿಯ ಮುಖ್ಯರಸ್ತೆಯ ಬಲಭಾಗದಲ್ಲಿ ಚರಂಡಿ ದುರಸ್ಥಿ ಕಾಮಗಾರಿ | 4.50 |
| 15 | ವಾರ್ಡ್ ನಂ. 13ರ ಉರ್ದು ಶಾಲೆ ಹತ್ತಿರ ಚರಂಡಿ ನಿರ್ಮಾಣ ಹಾಗೂ ಮಟನ್ ಮಾರ್ಕೆಟ್ ನಿಂದ ದಕ್ಷಿಣ ಭಾಗಕ್ಕೆ ಹೊಸದಾಗಿ ಕಟ್ಟಡ ನಿರ್ಮಾಣ | 9.50 |
| 16 | ವಾರ್ಡ್ ನಂ. 31ರ ರಂಗರಾಯರದೊಡ್ಡಿಯಲ್ಲಿ ಡೆಕ್ ಸ್ಲ್ಯಾಬ್ ನಿರ್ಮಾಣ | 1.35 |
| 17 | ವಾರ್ಡ್ ನಂ28:ರ ಐಜೂರು ಬಿ.ಎಂ.ರಸ್ತೆಯಲ್ಲಿ ಎ.ಬಿ.ಆರ್ ಕಿಟ್ಟಿರವರ ಮನೆ ಹಿಂಬಾಗದ ರಸ್ತೆ ) ಗುಂಡಪ್ಪ ಗಲ್ಲಿ ( ಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 0.60 |
| 18 | ವಾರ್ಡ್ ನಂ27 :ರ ವಿವೇಕಾನಂದನಗರದಲ್ಲಿನ ಕೆಂಗೇರಿ ನರಸಿಂಹಯ್ಯನವರ ತೋಟದ ಪಕ್ಕದ ರಸ್ತೆಯಲ್ಲಿ ನೀರು ಸರಬರಾಜು ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ | 0.27 |
| 19 | ವಾರ್ಡ್ ನ 23 .ರ ಇದ್ರೀಸ್ ತೋಟದ ಹತ್ತಿರ ಚರಂಡಿ ನಿರ್ಮಾಣ | 4.95 |
| 20 | ವಾರ್ಡ್ ನಂ 2 .ರಲ್ಲಿ ವಿನಾಯಕ ನಗರ ಬಿ.ಎಂ .ರಸ್ತೆಯಿಂದ ಮರಿಯಮ್ಮ ರವರ ಮನೆಯವರೆಗೆ ಚರಂಡಿ ನಿರ್ಮಾಣ | 2.40 |

PDF Created with deskPDF PDF Writer - Trial :: http://www.docudesk.com

| | | |
|---|---|---|
| 21 | ವಾರ್ಡ್ ನಂ 5 .ರಲ್ಲಿ ಅಂಗಡಿ ಗಂಗಪ್ಪ ರವರ ಮನೆಯಿಂದ ಹುರಿಮಿಶನ್ ನಂಜುಂಡಯ್ಯ ಮನೆಯರೆಗೆ ಕಾಂಕ್ರೀಟ್ ರಸ್ತೆ ಮತ್ತು ಗೋಪಾಲಯ್ಯ ಮನೆ ಹತ್ತಿರ ಭಜನೆ ಮಂದಿರವರೆಗೆ ಹಾಗೂ ಚರಂಡಿ ಮೇಲೆ ಸ್ಲಾಬ್ ಹಾಕುವುದು | 1.95 |
| 22 | ವಾರ್ಡ್ ನಂ 2 .ರಲ್ಲಿ ಬಿ.ಎಂ .ರಸ್ತೆ ಮಂಜುನಾಥ ಬೇಕರಿ ಹತ್ತಿರ ಚರಂಡಿ ಹಾಗು ಡೆಕ್ ಸ್ಲಾಬ್ ನಿರ್ಮಾಣ | 0.50 |
| 23 | ವಾರ್ಡ್ ನಂ 7 .ರಲ್ಲಿ ಅಗ್ರಹಾರ ಹಾಗು ಛತ್ರದ ಬೀದಿಯಲ್ಲಿ ಆರ್.ಸಿ.ಸಿ . ಡೆಕ್ ಸ್ಲಾಬ್ ನಿರ್ಮಾಣ | 2.00 |
| 24 | ವಾರ್ಡ್ ನಂ 9 .ರಲ್ಲಿ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ಶೆಟ್ಟರ ಮನೆವರೆಗೆ ಚರಂಡಿ ನಿರ್ಮಾಣ | 1.00 |
| 25 | ವಾರ್ಡ್ ನಂ 10 .ರಲ್ಲಿ ಜಮಿಯಾ ಮಸೀದಿ ಹತ್ತಿರ ಕಾಂಕ್ರೀಟ್ ರಸ್ತೆ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ | 1.35 |
| 26 | ವಾರ್ಡ್ ನಂ 12 .ರಲ್ಲಿ ನಗರಸಭಾ ಬಡಾವಣೆಯಲ್ಲಿ ಕಾಂಕ್ರೀಟ್ ರಸ್ತೆಯ ನಿರ್ಮಾಣ | 9.95 |
| 27 | ವಾರ್ಡ್ ನಂ 1 .ಅಂಚೆ ಕೆಂಪಯ್ಯನದೊಡ್ಡಿ ರಸ್ತೆಯಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಮುಂಭಾಗ ಚರಂಡಿ ನಿರ್ಮಾಣ | 1.00 |
| 28 | ವಾರ್ಡ್ ನಂ 1 .ಸಿಂಗ್ರಾಬೋವಿ ದೊಡ್ಡಿ ಅರಳಿ ಮರದಿಂದ ರವರ ರಾಜಣ್ಣ ರವರ ಮನೆಯವರೆಗೆ ಚರಂಡಿ ನಿರ್ಮಾಣ | 4.95 |
| 29 | ನಗರಸಭೆ ಕಛೇರಿ ಆವರಣದಲ್ಲಿರುವ ಕ್ರೀಡಾ ಹಾಸ್ಟೆಲ್ ಗೆ ನೀಡಿರುವ ಕೊಠಡಿಗಳಿಗೆ ಎ.ಸಿ ಶೀಟ್ ಅಳವಡಿಸುವುದು ಹಾಗೂ ಶೌಚಾಲಯ ನಿರ್ಮಾಣ | 0.95 |
| 30 | ವಾರ್ಡ್ ನಂ. 29,30ರ ಐಜೂರು ಟ್ಯಾಂಕ್ ರಸ್ತೆಯಿಂದ ಮೆಹಬೂಬ್ ಮನೆ ರಸ್ತೆವರೆಗೆ ಚರಂಡಿ ನಿರ್ಮಾಣ | 4.85 |
| 31 | ವಾರ್ಡ್ ನಂ. 27ರ ಮಾಗಡಿ ರಸ್ತೆ ಕೆಂಪೇಗೌಡ ವೃತ್ತದ ಬಳಿ ಒ.ಕೆ. ಸಾಮಿಲ್ ಲೇ ಔಟ್ ನಲ್ಲಿ ಚರಂಡಿ ನಿರ್ಮಾಣ | 7.00 |

ವಿಷಯ 54- ವಾರ್ಡ್ ನಂ. 20 ರಲ್ಲಿ ಮಹಮದೀಯನಗರದಲ್ಲಿ ವಾಸವಾಗಿರುವ ಅಬ್ದುಲ್ ರಶೀದ್ ಬಿನ್ ಲೇ ಅಬ್ದುಲ್ ಘನಿ ಮನವಿ ಸಲ್ಲಿಸಿ ಕೊತ್ತಿಪುರ ಅಮಾನಿಕೆರೆ ಖಾತೆ ನಂ. 57/690/66 ಎ-ಬಿ ರಲ್ಲಿ ಸಾರ್ವಜನಿಕ ರಸ್ತೆಗೆ ಒತ್ತುವರಿ ಮಾಡಿರುವ 20x2 ಅಡಿಗೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುವ ವಿಚಾರ.

ತೀರ್ಮಾನ 54- ವಿಷಯದ ಬಗ್ಗೆ ಸಭೆಯು ಚರ್ಚಿಸಿತು. ಅಧ್ಯಕ್ಷರು, ಪೌರಾಯುಕ್ತರು ಮತ್ತು ಸಂಬಂಧಿಸಿದ ಸದಸ್ಯರೊಡನೆ ತಾಂತ್ರಿಕ ಸಿಬ್ಬಂದಿ ಸ್ಥಳ ಪರಿಶೀಲನೆ ಮಾಡಿ ಸ್ಥಳದ ಮಾಹಿತಿ ಆಧರಿಸಿ ಕ್ರಮವಹಿಸಬಹುದೆಂದು ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಅಧಿಕಾರ ಪ್ರತ್ಯೇಜಿಸುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

PDF Created with deskPDF PDF Writer - Trial :: http://www.docudesk.com

ವಿಷಯ 55- ಸಮುದಾಯ ಅಭಿವೃದ್ಧಿ ಸಂಘಕ್ಕೆ (ಸಿಡಿಎಸ್) ಚುನಾಯಿತ ಸದಸ್ಯರಿಂದ ಇಬ್ಬರು ಮಹಿಳಾ ಸದಸ್ಯರನ್ನು ಆಯ್ಕೆ ಮಾಡುವ ವಿಚಾರ.

ತೀರ್ಮಾನ 55- ಸಮುದಾಯ ಅಭಿವೃದ್ಧಿ ಸಂಘಕ್ಕೆ (ಸಿಡಿಎಸ್) ಶ್ರೀಮತಿ ರತ್ನಮ್ಮ ಮತ್ತು ಕು. ಸಿಂಧು ವಾಯ್ಕರ್ ರವರನ್ನು ನೇಮಿಸುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 56- ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 63ರ ಪ್ರಕಾರ ಸ್ಥಾಯಿ ಸಮಿತಿ ರಚಿಸುವ ವಿಚಾರ.

ತೀರ್ಮಾನ 56- ಸಭೆಯು ಸುದೀರ್ಘವಾಗಿ ಚರ್ಚಿಸಿ ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 63 ರ ಪ್ರಕಾರ ಸ್ಥಾಯಿ ಸಮಿತಿ ರಚನೆಗೆ ಕೆಳಕಂಡಂತೆ 11 ಜನ ಸದಸ್ಯರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರುಗಳ ವಿವರ
ಶ್ರೀಮತಿ/ಶ್ರೀ

1. ಎಸ್. ಸುರೇಶ್
2. ಸೋಮಶೇಖರ್ ರಾವ್
3. ಎ.ಜೆ. ಸುರೇಶ್
4. ಶಿವಕುಮಾರ್ ಸ್ವಾಮಿ
5. ನಾಸೀರ್ ಆಲಿಬೇಗ್
6. ಎಚ್. ಜಯಮ್ಮ
7. ಎಚ್. ಮಂಗಳ
8. ಬಿ. ಸುಜಾತ
9. ಜೆ. ಮುಕಂದರಾಜ್
10. ಮಹಮ್ಮದ್ ಅಜೀಂ
11. ಖಲೀಂ ಉಲ್ಲಾ (ಬಾಬಾ ಶೇಟ್)

ವಿಷಯ 57- ಅಧ್ಯಕ್ಷರ ಅನುಮೋದನೆಗೆ ತರಬಹುದಾದ ಇತರೇ ವಿಷಯಗಳು.

ವಿಷಯ 57 (ಎ)- ಸರ್ಕಾರಿ ಆದೇಶ ಸಂಖ್ಯೆ ಆರ್ ಡಿಎ-155-ಆರ್.ಸಿ.ಸಿ-06, ದಿ. 03.10.2006 ಮತ್ತು ಆರ್ ಡಿಎ-155-ಆರ್.ಸಿ.ಸಿ-06, ದಿ. 27.03.2006 ರ ಪತ್ರದಲ್ಲಿ 12 ನೇ ಹಣಕಾಸು ಯೋಜನೆಯಡಿಯಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣಗಳಿಗಾಗಿ 2006-07ನೇ ಸಾಲಿಗೆ ಬಿಡುಗಡೆಯಾಗಿರುವ ರೂ. 25 ಲಕ್ಷಗಳ ಅನುದಾನದ ಪೈಕಿ ರೂ. 2.04 ಲಕ್ಷಗಳ ಉಳಿತಾಯವಾಗಿರುವ ಹಣದಿಂದ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ನೀಡುವ ವಿಚಾರ.

ತೀರ್ಮಾನ 57 (ಎ)- ವಿಷಯವನ್ನು ಮಂಡಿಸಲಾಯಿತು. ಸರ್ಕಾರದ ಆದೇಶ ಸಂ. ಆರ್ ಡಿಎ-155-ಆರ್.ಸಿ.ಸಿ-06, ದಿ. 03.10.2006 ಮತ್ತು ಆರ್ ಡಿಎ-155-ಆರ್.ಸಿ.ಸಿ-06, ದಿ. 27.03.2006 ರಂತೆ ಬಿಡುಗಡೆಯಾಗಿರುವ ರೂ. 25 ಲಕ್ಷ ಅನುದಾನದಲ್ಲಿ ಕ್ರಿಯಾ ಯೋಜನೆ

PDF Created with deskPDF PDF Writer - Trial :: http://www.docudesk.com

ಮಂಜೂರಾತಿಯಾಗಿರುವ 5 ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದನ್ನು ಸಭೆಯಲ್ಲಿ ವಿವರಿಸಲಾಯಿತು. ನಂತರ ಉಳಿತಾಯವಾಗಿರುವ ರೂ. 2.04 ಲಕ್ಷಗಳಿಗೆ ಈ ಕೆಳಕಂಡ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಂಡು ಮಾನ್ಯ ಜಿಲ್ಲಾಧಿಕಾರಿಗಳರವರಿಂದ ಆಡಳಿತಾತ್ಮಕ ಮಂಜೂರಾತಿ ಪಡೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | |
|---|---|
| ವಾರ್ಡ್ ನಂ, 2 ರಲ್ಲಿ ಅಂಬೇಡ್ಕರ್ ನಗರದಲ್ಲಿ ಶ್ರೀ ಅಣ್ಣಮ್ಮ ದೇವಸ್ಥಾನದ ಮುಂಭಾಗ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 2.04 |

ವಿಷಯ 57 (ಬಿ)- ಸರ್ಕಾರಿ ಆದೇಶ ಸಂಖ್ಯೆ ನಅಇ-47-ಎಸ್. ಎಫ್.ಸಿ-07, ದಿನಾಂಕ 02.08.2007 ಬಿಡುಗಡೆಯಾಗಿರುವ ರೂ. 5.00 ಕೋಟಿ ರೂ.ಗಳ ಅನುದಾನದಲ್ಲಿ 2.00 ಕೋಟಿ ರೂ.ಗಳಿಗೆ ಈಗಾಗಲೇ ಕ್ರಿಯಾಯೋಜನೆ ಮಂಜೂರಾತಿ ಆಗಿದ್ದು, ಹಾಗೂ 2.75 ಕೋಟಿ ರೂ.ಗಳಿಗೆ ಕಛೇರಿ ಸಂಕೀರ್ಣ ಕಟ್ಟಲು ಆಡಳಿತಾತ್ಮಕ ಅನುಮೋದನೆ ಸರ್ಕಾರದಿಂದ ಬಂದಿದ್ದು, ಬಾಕಿ ಇರುವ ರೂ. 25.00 ಲಕ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಮಂಜೂರಾತಿ ಪಡೆಯುವ ವಿಚಾರ.

ತೀರ್ಮಾನ 57(ಬಿ)- ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು. ಸರ್ಕಾರಿ ಆದೇಶದಂತೆ ಬಿಡುಗಡೆಯಾಗಿರುವ 5.00 ಕೋಟಿ ಅನುದಾನದಲ್ಲಿ 2.00 ಕೋಟಿ ಮತ್ತು 2.75 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿರುವುದನ್ನು ಪೌರಾಯುಕ್ತರು ಸಭೆಗೆ ವಿವರಿಸಿದರು. ನಂತರ ಬಾಕಿ ಇರುವ 25.00 ಲಕ್ಷ ರೂ.ಗಳಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಹಾಗೂ ಆಡಳಿತಾತ್ಮಕ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವುದೆಂದು ಸಭೆಯು ತೀರ್ಮಾನಿಸಿತು.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ |
|---|---|---|
| 1. | ವಾರ್ಡ್ ನಂ. 1 ರ ದ್ಯಾವರಸೇ ಗೌಡನ ದೊಡ್ಡಿ ರಸ್ತೆಯಲ್ಲಿ ಅಂಚೆಕಂಪಯ್ಯನ ದೊಡ್ಡಿ ಮಳ್ಳಪ್ಪನವರ ಮಗ ಶಿವಣ್ಣ ರವರ ಮನೆ ಮುಂಭಾಗ ಆರ್.ಸಿ.ಸಿ ಕಲ್ವರ್ಟ್ ಹಾಗು ಚರಂಡಿ ನಿರ್ಮಾಣ | 4.50 |
| 2. | ವಾರ್ಡ್ ನಂ, 8ರಲ್ಲಿ ರಾಘವೇಂದ್ರ ಕಾಲೋನಿಯಲ್ಲಿ ದರ್ಗಾದಿಂದ ಸೌತೇಕಾಯಿ ಸಿದ್ಧನವರ ಮನೆಯವರೆಗೆ ಚರಂಡಿ ಮತ್ತು ರಾಮಚಂದ್ರ ಭಟ್ಟರ ಮನೆ ಮುಂಭಾಗ ಕಾಂಕ್ರೀಟ್ ರಸ್ತೆ ಹಾಗು ಚರಂಡಿ ನಿರ್ಮಾಣ | 2.75 |
| 3. | ವಾರ್ಡ್ ನಂ, 20ರ ಶೀರ್ ಹಳ್ಳದಿಂದ ನಯಾಜ್ ಮನೆವರೆಗೆ ಚರಂಡಿ ಕಾಮಗಾರಿ | 7.00 |
| 4. | ವಾರ್ಡ್ ನಂ,29 ರ ಐಜೂರು ಪಾರ್ಕ್ ನಿಂದ ದೊಡ್ಡಮೋರಿ ವರೆಗೆ ಚರಂಡಿ ನಿರ್ಮಾಣ | 4.50 |
| 5 | ವಾರ್ಡ್ ನಂ, 19 ರಲ್ಲಿ ಮಹಬೂಬ್ ನಗರದಲ್ಲಿ ನೂರುಲ್ಲಾ ಖಾನ್ ಮನೆ ಹತ್ತಿರ ಚರಂಡಿ ಮತ್ತು ರಸ್ತೆ ನಿರ್ಮಾಣ | 4.25 |
| | ಒಟ್ಟು | 25.00 |

PDF Created with deskPDF PDF Writer - Trial :: http://www.docudesk.com

ವಿಷಯ 57 (ಸಿ)- ವಾರ್ಡ್ ನಂ. 24 ರ ಸೀರ್ ಹಳ್ಳಕ್ಕೆ ಸಂಪರ್ಕ ಸೇತುವೆ ನಿರ್ಮಾಣ ಮಾಡುತ್ತಿರುವ ಸೇತುವೆಗೆ ಸಂಪರ್ಕ ಕಲ್ಪಿಸಲು ರಸ್ತೆಗಾಗಿ ಜಮೀನನ್ನು ಮಾಲೀಕರಾದ ಸೈಯದ್ ವಜೀರ್ ಬಿನ್ ಸೈಯದ್ ಯಾಕುಬ್ ಇವರಿಂದ ಖರೀದಿಸಲು ಅನುಮೋದನೆ ನೀಡುವ ವಿಚಾರ.

ತೀರ್ಮಾನ 57 (ಸಿ)- ವಿಷಯವನ್ನು ಸಭೆಗೆ ತಾಂತ್ರಿಕ ಶಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಂಡಿಸಿದರು ಮಾನ್ಯ ಜಿಲ್ಲಾಧಿಕಾರಿಗಳ ಪತ್ರದ ಸಂಖ್ಯೆ ರಾಜಿಕ-ಎಂಯುಎನ್(2)-ಸಿಆರ್-103-2008-09, ದಿ. 03.06.2008 ರಂದು ನಗರಸಭಾ ವ್ಯಾಪ್ತಿಯ ವಾರ್ಡ್ ನಂ. 24 ರ ಯಾರಬ್ ನಗರದ ಸೀರ್ ಹಳ್ಳಕ್ಕೆ ಸಂಪರ್ಕ ಸೇತುವೆ ನಿರ್ಮಾಣ ಮಾಡಲು ರಸ್ತೆಗೆ ಅವಶ್ಯವಿರುವ ಖಾಸಗೀ ಜಮೀನನ್ನು ಖರೀದಿಸುವಂತೆ ವಿವರಣೆ ನೀಡಿದರು. ಸದರಿ ರಸ್ತೆಯ ಶ್ರೀ ಸೈಯದ್ ವಜೀರ್ ಬಿನ್ ಸೈಯದ್ ಯಾಕುಬ್ ರವರಿಗೆ ಸರ್ವೇ ನಂ. 15-2 ರಲ್ಲಿ ಬರಲಿರುವ ಒಟ್ಟು 2.30 ಗುಂಟೆ ಪ್ರದೇಶದಲ್ಲಿ ಸಾರ್ವಜನಿಕ ರಸ್ತೆಗಾಗಿ 0.05 ಗುಂಟೆ ಪ್ರದೇಶವನ್ನು ಅಂದರೆ 20x278 ಅಡಿಗಳನ್ನು ಖರೀದಿಸುವುದು ಅವಶ್ಯವಿರುತ್ತದೆ. ದಿ. 08.01.2007 ರಂದು ನಡೆದ ಮಾನ್ಯ ಆಡಳಿತಾಧಿಕಾರಿಗಳ ಸಭೆಯಲ್ಲಿ ರಸ್ತೆಗಾಗಿ ಅವಶ್ಯವಿರುವ ಜಮೀನನ್ನು ಖರೀದಿಸಲು ನಿರ್ಣಯ ಕೈಗೊಂಡಿರುವುದನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು. ಸದರಿ ಜಮೀನು ರಸ್ತೆಗಾಗಿ ಅವಶ್ಯವಿರುವ ಅನುದಾನವನ್ನು ನಗರಸಭಾ ನಿಧಿಯಿಂದ ನೀಡಬಹುದೆಂದು ಸಭೆಯು ತೀರ್ಮಾನಿಸಿತು. ಜಮೀನು ಖರೀದಿಯನ್ನು ಈಗಾಗಲೇ ಸಬ್ ರಿಜಿಸ್ಟ್ರಾರ್ ರವರ ದರದಂತೆ ಖರೀದಿಸಲು ಸಭೆಯು ತೀರ್ಮಾನಿಸಿತು.

ವಿಷಯ 57 (ಡಿ)- ಯುಐಡಿಎಸ್ಎಸ್ಎಂಟಿ ಯೋಜನೆಯಡಿ ಮಳೆ ನೀರು ಚರಂಡಿ (Storm Water Drain) ಕೇಂದ್ರ ಸರ್ಕಾರ ಮೊದಲ ಕಂತು ರೂ. 292.00 ಲಕ್ಷ, ರಾಜ್ಯ ಸರ್ಕಾರದ ಪಾಲು ರೂ. 36.50 ಲಕ್ಷ ಸೇರಿ ಒಟ್ಟು ರೂ. 3,28,50,000-00 ಗಳನ್ನು ಬಿಡುಗಡೆ ಮಾಡಿದ್ದು, (ಪೌನಿ-ಯುಐಡಿಎಸ್ಎಸ್ಎಂಟಿ-ಸಿಆರ್-03-2007-08, ದಿ.28.03.2008, ವಿಜಯಾಬ್ಯಾಂಕ್ ಡಿಡಿ ದಿ. 02.06.2008, ಸ್ವೀಕೃತಿ ದಿ. 10.06.2008) ಸ್ಥಳೀಯ ಸಂಸ್ಥೆ (ನಗರಸಭೆ) ಯ ಪಾಲು ರೂ. 36.50 ಲಕ್ಷಗಳನ್ನು ಸದರಿ ಖಾತೆಗೆ ಹೊಂದಾಣಿಕೆ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 57(ಡಿ) - ವಿಷಯವನ್ನು ಪರಿಶೀಲಿಸಲಾಯಿತು. ನಗರಸಭೆಯ ಸಂಪನ್ಮೂಲವು ನಗರಸಭೆಯ ದೈನಂದಿನ ಖರ್ಚುಗಳಿಗೆ ಬಳಕೆಯಾಗುತ್ತಿದ್ದು, ನಗರಸಭೆಯು ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ಘನ ಸರ್ಕಾರವು 2008-09ನೇ ಸಾಲಿಗೆ ಮುಂದೆ ಬಿಡುಗಡೆ ಮಾಡುವ ಎಸ್.ಎಫ್. ಸಿ ಮುಕ್ತನಿಧಿಯಲ್ಲಿ ಹೊಂದಾಣಿಕೆ ಮಾಡುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 57 (ಇ)- ನಗರಸಭೆಯ ಪ್ರಸ್ತುತ ಇರುವ ನಾಗರೀಕ ಸೇವಾಕೇಂದ್ರವನ್ನು ಉನ್ನತ್ತೀಕರಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ. (ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಡಿಎಂಎ-ಎಂಆರ್ ಸಿ-ಸಿಆರ್-75-2007-08, ದಿ. 29.01.2008 ರ ಮೇರೆಗೆ)

PDF Created with deskPDF PDF Writer - Trial :: http://www.docudesk.com

ತೀರ್ಮಾನ 57 (ಇ)- ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆಯನ್ನು ಸಭೆಗೆ ಓದಿ ತಿಳಿಸಲಾಯಿತು. ಈಗಾಗಲೇ ನಾಗರೀಕ ಸೇವಾಕೇಂದ್ರ ಈ ನಗರಸಭೆಯಲ್ಲಿ ತೆರೆಯಲಾಗಿದ್ದು, ಅಗತ್ಯತೆಯನ್ನು ಅನುಸರಿಸಿ ಉನ್ನತ್ತೀಕರಿಸಲು ಕ್ರಮಕೈಗೊಳ್ಳಲು ತಾಂತ್ರಿಕ ಶಾಖೆಯವರಿಗೆ ನಿರ್ದೇಶಿಸಲಾಯಿತು.

ವಿಷಯ 57 (ಎಫ್) - ಶ್ರೀಮತಿ ಹನುಮ ನರಸಮ್ಮ ರವರು ಹಿಂಧೂ ಸ್ಮಶಾನದಲ್ಲಿ ಶವ ಸಂಸ್ಕಾರ (ಸುಡಲು) ಕ್ಕೆ ಪ್ಲಾಟ್ ಫಾರಂ ಮುಪತ್ತಾಗಿ ನಿರ್ಮಿಸಿಕೊಡುವುದಾಗಿ ಕೋರಿರುವ ವಿಚಾರ- ಪರಿಶೀಲನೆ

ತೀರ್ಮಾನ 57 (ಎಫ್) - ವಿಷಯವನ್ನು ಪರಿಶೀಲಿಸಲಾಯಿತು. ಶ್ರೀಮತಿ ಹನುಮ ನರಸಮ್ಮ ರವರಿಗೆ ಬಿ.ಎಂ. ರಸ್ತೆಯಲ್ಲಿ ಬರುವ ಹಿಂದೂ ರುದ್ರಭೂಮಿಯಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಶವ ಸುಡಲು ಪ್ಲಾಟ್ ಫಾರಂ ನಿರ್ಮಿಸಲು ನಗರಸಭೆಯಿಂದ ಯಾವುದೇ ಅಭ್ಯಂತರವಿಲ್ಲವೆಂದು ಸಭೆಯು ತೀರ್ಮಾನಿಸಲಾಯಿತು.

ವಿಷಯ 57 (ಜಿ)- ದಿ. 24 08.2006 ರಂದು ಐಡಿಎಸ್‌ಎಂಟಿ ವಾಣಿಜ್ಯ ಸಂಕೀರ್ಣದ ಮಳಿಗೆ ಸಂಖ್ಯೆ 35 ನ್ನು ರೂ. 1,57,000-00 ಗಳಿಗೆ ಬಿಡ್ ಮಾಡಿದ್ದು, ಶೇ. 25 ರಷ್ಟು ಹಣ ಪಾವತಿಸಿದ್ದು, ಉಳಿಕೆ ಹಣ ರೂ. 1,17,750-00 ರೂ.ಗಳನ್ನು ಪಾವತಿಸುವಂತೆ 3 ಬಾರಿ ನೋಟೀಸ್ ನೀಡಿದ್ದರೂ ಹಣ ಪಾವತಿಸಿರುವುದಿಲ್ಲ. ದಿ. 03.06.2008 ರಂದು ಸದರಿ ಬಿಡ್ಡುದಾರರಾದ ಶ್ರೀ ವಿ. ರಮೇಶ್ ಬಿನ್ ವೆಂಕಟಗಿರಿಯಪ್ಪ ಅಗ್ರಹಾರ ರವರು ಮನವಿ ಸಲ್ಲಿಸಿ ಉಳಿಕೆ ಹಣ ರೂ. 1,17,750-00 ಗಳನ್ನು ಪಾವತಿಸುವುದಾಗಿ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 57 (ಜಿ)- ವಿಷಯವನ್ನು ಸಭೆಯು ಕೂಲಂಕುಶವಾಗಿ ಚರ್ಚಿಸಿತು. ಟೆಂಡರ್ ಷರತ್ತಿನಂತೆ ಹರಾಜಾದ ನಂತರ ಸರ್ಕಾರದಿಂದ ಮಂಜೂರಾದ 15 ದಿನಗಳಲ್ಲಿ ಪೂರ್ಣ ಟೆಂಡರ್ ಮೊಬಲಗನ್ನು ಜಮಾ ಮಾಡಬೇಕಾಗಿದ್ದು, ಬಿಡ್ ದಾರರು ಜಮಾ ಮಾಡದೇ ಇದ್ದುದ್ದರಿಂದ ಸದರಿಯವರೇ ಪ್ರಸ್ತುತ ಜಮಾ ಮಾಡಲು ಮುಂದೇ ಬಂದಿರುವುದರಿಂದ ಹಾಲಿ ಪಾವತಿಸಬೇಕಾಗಿರುವ ಬಿಡ್ ಮೊಬಲಗಿನ ಜೊತೆಗೆ ದಂಡ ರೂ. 25000-00 ಗಳನ್ನು ವಿಧಿಸುವುದೆಂದು ಇಂತಹ ಪ್ರಕರಣಗಳು ಇದ್ದಲ್ಲಿ ಸದರಿ ಬಿಡ್ ದಾರರಿಗೂ ನೋಟೀಸ್ ಜಾರಿ ಮಾಡಿ 15 ದಿನದೊಳಗೆ ಬಿಡ್ ಮೊಬಲಗು ಮತ್ತು ದಂಡವನ್ನು ಜಮಾ ಪಡೆಯುವುದೆಂದು ಈ ಅವಕಾಶ ಮೀರಿದ್ದಲ್ಲಿ ಬಿಡ್ ದಾರರು ಪಾವತಿಸಿರುವ ಪ್ರಾಥಮಿಕ ಠೇವಣಿಯನ್ನು ನಗರಸಭೆಗೆ ಮುಟ್ಟುಗೋಲು ಹಾಕಿಕೊಂಡು ಮರು ಟೆಂಡರ್ ಕರೆಯುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 57 (ಎಚ್)- ಸಭೆಯ ಠರಾವು 36, ದಿ. 16.06.2007 ರಲ್ಲಿ ಪೌರಾಡಳಿತ ಸಚಿವರ ದಿ. 18.06.2007ರ ಸಭೆಯ ಸೂಚನೆಯಂತೆ ಸರ್ಕಾರವು 2007-08ನೇ ಸಾಲಿಗೆ ವಿವಿಧ ಶೀರ್ಷಿಕೆಯಡಿ ಬಿಡುಗಡೆ ಮಾಡುವ ಅನುದಾನಕ್ಕೆ ಅಂದಾಜು ರೂ. 5.80 ಕೋಟಿಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಆಡಳಿತಾತ್ಮಕ ಮಂಜೂರಾತಿ ಪಡೆದು ನಿಯಮಾನುಸಾರ ಕಾಮಗಾರಿಗಳನ್ನು

PDF Created with deskPDF PDF Writer - Trial :: http://www.docudesk.com

ಅನುಷ್ಠಾನುಗೊಳಿಸಲಾಗಿದೆ. ಈ ಸಂಬಂಧವಾಗಿ 2007-08 ರಲ್ಲಿ ಎಸ್.ಎಫ್. ಸಿ ಮುಕ್ತನಿಧಿಯಡಿಯಲ್ಲಿ ರೂ. 363.72 ಲಕ್ಷಗಳು ಮತ್ತು ಎಸ್.ಎಫ್.ಸಿ ವಿಶೇಷ ಅನುದಾನ ರೂ. 175.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಮುಕ್ತನಿಧಿಯಡಿ ಬಿಡುಗಡೆಯಾದ ಅನುದಾನ ಪೂರ್ಣ

ಖರ್ಚಾಗಿದ್ದು, ಕ್ರಿಯಾಯೋಜನೆಯಲ್ಲಿನ ಕಾಮಗಾರಿಗಳಿಗೆ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮೇಲ್ಕಂಡ ಕಾಮಗಾರಿ ಬಿಲ್ಲುಗಳ ಪಾವತಿಗೆ ಬಳಸುತ್ತಿರುವುದನ್ನು ಅನುಮೋದಿಸುವ ವಿಚಾರ.

ತೀರ್ಮಾನ 57 (ಎಚ್)- - ಸಭೆಯು ಒಪ್ಪಿ ಸರ್ವಾನುಮತದಿಂದ ಅನುಮೋದಿಸಿತು.

ವಿಷಯ 57 (ಐ)- ಶ್ರೀ. ಚನ್ನಮಾರನಹಳ್ಳಿ ಮಲ್ಲೇಶ್, ಐಜೂರು, ರಾಮನಗರ ಯುವ ಬರಹಗಾರರು ದಿ. 14-05 2008 ರಂದು ಮನವಿ ಸಲ್ಲಿಸಿ ತಾವು ಬರೆದಿರುವ ಕವನ ಸಂಕಲನ ಹೊರ ತರಲು ರೂ. 18,200-00 ಗಳ ಧನ ಸಹಾಯ ಕೋರಿರುವ ಬಗ್ಗೆ ಪರಿಶೀಲನೆ.

ತೀರ್ಮಾನ 57 (ಐ)- ವಿಷಯವನ್ನು ಪರಿಶೀಲಿಸಲಾಯಿತು. ಈ ಸಾಲಿನ ಆಯ-ವ್ಯಯದಲ್ಲಿ ಕವಿಗಳನ್ನು ಪ್ರೋತ್ಸಾಹಿಸಲು ಹಣವನ್ನು ಕಾಯ್ದಿರಿಸಿದ್ದು ಈ ಶೀರ್ಷಿಕೆಯಲ್ಲಿ ರೂ. 5,000-00 ಧನ ಸಹಾಯ ನೀಡುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಮೋದಿಸಿತು.

ವಿಷಯ 58 (ಜೆ)- ಸಿಟಿ ಮ್ಯಾನೇಜರ್ಸ್ ಅಸೋಸಿಯೇಷನ್ ಬೆಂಗಳೂರು ರವರು ಪತ್ರ ಬರೆದು 2008-09ನೇ ಸಾಲಿನ ವಾರ್ಷಿಕ ಸದಸ್ಯತ್ವ ಶುಲ್ಕ ರೂ. 25.000-00 ಪಾವತಿಸಿ, ಸದಸ್ಯತ್ವವನ್ನು ನವೀಕರಿಸಿಕೊಳ್ಳಲು ಕೋರಿರುವ ಮೇರೆಗೆ ಪಾವತಿಸುವ ವಿಚಾರ.

ತೀರ್ಮಾನ 57 (ಜೆ)- ಪ್ರತಿ ವರ್ಷದಂತೆ 2008-09ನೇ ಸಾಲಿನ ವಾರ್ಷಿಕ ಸದಸ್ಯತ್ವ ಶುಲ್ಕ ರೂ. 25.000-00 ಪಾವತಿಸಿ, ಸದಸ್ಯತ್ವವನ್ನು ನವೀಕರಿಸಿಕೊಳ್ಳಲು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಮೋದಿಸಿತು.

ವಿಷಯ 57 (ಕೆ)- ಜಾಲಮಂಗಲ ರಸ್ತೆಯ ಸಣ್ಣಮ್ಮ ಕೋಂ ಲೇ ಕೃಷ್ಣಪ್ಪ ಇವರ ಸಾಕು ಎಮ್ಮೆಯು ವಿದ್ಯುತ್ ಪ್ರವಾಹದಿಂದ ಮೃತಪಟ್ಟಿದ್ದು, ಇವರಿಗೆ ಪರಿಹಾರ ನೀಡುವ ವಿಚಾರ.

ತೀರ್ಮಾನ 57 (ಕೆ)- ವಿಷಯವನ್ನು ಪರಿಶೀಲಿಸಲಾಯಿತು. ಅರ್ಜಿದಾರರು ವಿಧವೆಯಾಗಿದ್ದು, ಈ ಎಮ್ಮೆ ಸಾಕಾಣಿಕೆಯಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದು, ಬೀದಿದೀಪದ ಕಂಬದಲ್ಲಿ ಆಕಸ್ಮಿಕವಾಗಿ ವಿದ್ಯುತ್ ಪ್ರವಾಹದಿಂದ ಮೃತಪಟ್ಟಿರುವುದರಿಂದ ಮುಂದಿನ ಜೀವನ ನಿರ್ವಹಣೆಗಾಗಿ ಮಾನವೀಯತೆ ದೃಷ್ಟಿಯಿಂದ ಸದರಿ ಕುಟುಂಬದವರಿಗೆ ರೂ. 5000-00 ಗಳನ್ನು ಪರಿಹಾರ ರೂಪದಲ್ಲಿ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 57 (ಎಲ್)- 2007-08ನೇ ಸಾಲಿಗೆ 14 ವಾರ್ಡಗಳ ಘನತ್ಯಾಜ್ಯ ವಸ್ತು ನಿರ್ವಹಣೆಯನ್ನು ಮಾಸಿಕ ರೂ. 3.60 ಲಕ್ಷಗಳಿಗೆ ಗುತ್ತಿಗೆ ನೀಡಲಾಗಿದ್ದು, ಸಿಬ್ಬಂದಿ ಕೊರತೆಯಿಂದ 2008-09ನೇ ಸಾಲಿಗೆ 19 ವಾರ್ಡಗಳ ಘನತ್ಯಾಜ್ಯ ವಸು ನಿರ್ವಹಣೆಯನ್ನು ಗುತ್ತಿಗೆ ನೀಡಲು ಕ್ರಮಕೈಗೊಂಡಿದ್ದು ಪ್ರಯುಕ್ತ 2008 ನೇ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ವಿಧಾನಸಭಾ ಚುನಾವಣೆ ಸಂಹಿತೆ ಜಾರಿಯಲ್ಲಿ

PDF Created with deskPDF PDF Writer - Trial :: http://www.docudesk.com

ಇದ್ದುದ್ದರಿಂದ 1ನೇ ಏಪ್ರಿಲ್ 2008 ಕ್ಕೆ ಕೆಲಸದ ಆದೇಶ ನೀಡಲು ಸಾಧ್ಯವಾಗದ ಕಾರಣ 2007-08ನೇ ಸಾಲಿಗೆ ಮಂಜೂರಾಗಿರುವ ದರಕ್ಕೆ 14 ವಾರ್ಡಗಳ ಜೊತೆಗೆ ಹೆಚ್ಚುವರಿಯಾಗಿ 5 ವಾರ್ಡಗಳ ಘನತ್ಯಾಜ್ಯ ನಿರ್ವಹಣೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದಿ. 16.04.2008 ರಿಂದ ಕಾರ್ಯಾದೇಶ ನೀಡಿರುವುದನ್ನು ಅನುಸಮರ್ಥನೆಗೊಳಿಸುವ ವಿಚಾರ.

ತೀರ್ಮಾನ 57 (ಎಲ್)- ವಿಷಯವನ್ನು ಪರಿಶೀಲಿಸಲಾಗಿ ನಗರಸಭೆಯಲ್ಲಿ ಲಭ್ಯವಿರುವ ಪೌರಕಾರ್ಮಿಕರ ನಿವೃತ್ತಿ, ಸೇವೆಯಲ್ಲಿದ್ದಾಗಲೇ ಮರಣ ಹೊಂದಿರುವುದು ಮತ್ತು ಡಿ ಗ್ರೂಪ್ ನೌಕರರ ಕೊರತೆಯಿಂದ ಪೌರಕಾರ್ಮಿಕರುಗಳನ್ನು ಕಛೇರಿ ಕೆಲಸಗಳಿಗೆ ನಿಯೋಜಿಸಿರುವುದರಿಂದ 17 ವಾರ್ಡಗಳ ಘನತ್ಯಾಜ್ಯ ವಸ್ತು ವಿಲೇವಾರಿ ಸಾರ್ವಜನಿಕ ಹಿತದೃಷ್ಟಿಯಿಂದ ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದಿರುವುದನ್ನು ಪರಿಗಣಿಸಿ ಹೆಚ್ಚುವರಿಯಾಗಿ 5 ವಾರ್ಡಗಳ ಘನತ್ಯಾಜ್ಯ ವಸ್ತು ನಿರ್ವಹಣೆಯನ್ನು 2007-08ರ ಸಾಲಿಗೆ ಅನುಮೋದನೆಯಾಗಿರುವ ದರಕ್ಕೆ ದಿ. 16.04.2008 ರಿಂದ ಕಾರ್ಯಾದೇಶ ನೀಡಿರುವುದನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಸಮರ್ಥನೆಗೊಳಿಸಲಾಯಿತು.

ವಿಷಯ- 57 (ಎಂ) - ಚಿಕೂನ್ ಗುನ್ಯಾ ತಡೆಗಟ್ಟಲು ಪೈರೋಥ್ರಿನ್ ಎಕ್ಸಾಟ್ರಕ್ಟ್ ಸಿಂಪಡಿಸಲು ಫಾಗಿಂಗ್ ಯಂತ್ರ ಖರೀದಿಸುವ ವಿಚಾರ.

ತೀರ್ಮಾನ 57 (ಎಂ) - ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ರಾಜ್ಯದೆಲ್ಲೆಡೆ ಚಿಕೂನ್ ಗುನ್ಯಾ ಕಾಯಿಲೆ ಹಬ್ಬುತ್ತಿರುವ ಬಗ್ಗೆ ಮಾಧ್ಯಮಗಳ ಮೂಲಕ ತಿಳಿದುಬಂದಿದ್ದು, ಬೆಂಗಳೂರಿನಲ್ಲಿಯು ಸಹ ಚಿಕೂನ್ ಗುನ್ಯಾ ಕಾಯಿಲೆ ಹಬ್ಬಿರುವುದು ತಿಳಿದುಬಂದಿರುತ್ತದೆ. ಮಳೆಗಾಲವಾದ್ದರಿಂದ ಸೊಳ್ಳೆಗಳ ಸಂತಾನೋತ್ಪತ್ತಿ ತಡೆಗಟ್ಟಲು ತುರ್ತಾಗಿ ರಾಸಾಯನಿಕ ಔಷಧಿ ಸಿಂಪಡಿಸುವ ಅವಶ್ಯಕತೆ ಇರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ನಿಯಾಮಾನುಸಾರ 3 ಫಾಗಿಂಗ್ ಯಂತ್ರಗಳನ್ನು ಖರೀದಿಸಲು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಿತು.

-ಸಹಿ/-

{ಶೇಷಾದ್ರಿ (ಶಶಿ)}
ಅಧ್ಯಕ್ಷರು,
ನಗರಸಭೆ, ರಾಮನಗರ.

PDF Created with deskPDF PDF Writer - Trial :: http://www.docudesk.com